2. ಅಧ್ಯಕ್ಷರ ಅಪ್ಪಣೆ ಮೇರೆಗೆ ಚರ್ಚಿಸಲಾದ ವಿಷಯ:

(ಅ) ವಿಷಯ:– ಕಲ್ಲಿದ್ದಲು ಖರೀದಿ ವ್ಯವಹಾರದಲ್ಲಿ ನಡೆದಿದೆ ಎನ್ನಲಾದ ಅವ್ಯವಹಾರದ ಬಗ್ಗೆ ಚರ್ಚಿಸಲು ಅನುಮತಿ ಕೋರಿಕೆ.

ಶ್ರೀ ಬಿ. ಎಸ್. ಯಡಿಯೂರಪ್ಪ (ಮುಖ್ಯಮಂತ್ರಿಗಳು) :– ಮಾನ್ಯ ಅಧ್ಯಕ್ಷರೆ, ನಿನ್ನೆ ದಿವಸ ನಿಮ್ಮ ಅಪ್ಪಣೆ ಪಡೆದು ಮಾನ್ಯ ಸಭಾಪತಿಗಳಿಗೂ ಪತ್ರ ಬರೆದು infosysನ ನಾರಾಯಣಮೂರ್ತಿಯವರು, ಶ್ರೀಮತಿ ಸೋನಿಯಾ ಗಾಂಧಿಯವರು, ಬಂದಿದ್ದರು. ವಿಶೇಷ ಕಾರ್ಯಕ್ರಮ ಇತ್ತೆಂದು ಅನಿವಾರ್ಯವಾಗಿ ನಾನು ಹೋಗಬೇಕಾಯಿತು. ಆ ಸಂದರ್ಭದಲ್ಲಿ ನಮ್ಮ ಮಾನ್ಯ ಹಿರಿಯ ಸದಸ್ಯರು ಜೆಡಿಎಸ್ ಮುಖಂಡರಾದ ರೇವಣ್ಣನವರು,.........

ಶ್ರೀ ಹೆಚ್.ಡಿ. ರೇವಣ್ಣ :– ಚರ್ಚೆ ಈಗ ಶುರು ಮಾಡಿ ಎಂದರೆ ನನ್ನದೇನೂ ಅಭ್ಯಂತರವಿಲ್ಲ.

ಅಧ್ಯಕ್ಷರು :– ಅವರು ಏನು ಹೇಳುತ್ತಾರೆ ಕೇಳಿ. ಆಮೇಲೆ ನೀವು ಹೇಳಿ.

ಶ್ರೀ ಬಿ.ಎಸ್. ಯಡಿಯೂರಪ್ಪ :– ಮಾತನಾಡುವುದಕ್ಕೆ ಬಿಡಲಿಲ್ಲ ಎಂದರೆ ಹೇಗೆ?

(ಗೊಂದಲ)

ಶ್ರೀ ಹೆಚ್. ಡಿ. ರೇವಣ್ಣ :– ಮೊನ್ನೆ ಮುಖ್ಯಮಂತ್ರಿಗಳು ಹೇಳಿಕೆ ಕೊಟ್ಟಿದ್ದಾರೆ.

ಅಧ್ಯಕ್ಷರು :– ಚರ್ಚೆಗೂ ಅವಕಾಶ ಕೊಡುತ್ತೇನೆ.

ಶ್ರೀ ಹೆಚ್. ಡಿ. ರೇವಣ್ಣ :– ನಾನು ಸೂಚನೆ ಕೊಟ್ಟಿದ್ದೇನೆ. ಚರ್ಚೆಗೆ ಅವಕಾಶ ಕೊಡಿ.

ಅಧ್ಯಕ್ಷರು :– ಚರ್ಚೆಗೆ ಅವಕಾಶ ಕೊಡುತ್ತೇನೆಂದು ಹೇಳಿದ್ದೆನ್ನೆಲ್ಲಾ, ಮಾನ್ಯ ಮುಖ್ಯಮಂತ್ರಿಗಳು ಅವರೇನು ಹೇಳುತ್ತಾರೆ ನೋಡೋಣ. ಅವರು ಇನ್ನು ಏನೂ ಹೇಳಿಲ್ಲ. ಅವರು ಏನು ಮಾತನಾಡಿಲ್ಲ. ನನಗೆ ಇದು ಅರ್ಥವಾಗುತ್ತಿಲ್ಲ.

(ಗೊಂದಲ)

ಎಲ್ಲರೂ ಮಾತನಾಡಬೇಡಿ. ಮಾನ್ಯ ಮುಖ್ಯಮಂತ್ರಿಗಳು ಎದ್ದು ನಿಂತಿದ್ದಾರೆ. ಅವರೇನು ಹೇಳುತ್ತಾರೆ ಕೇಳೋಣ.

ಶ್ರೀ ಹೆಚ್. ಡಿ. ರೇವಣ್ಣ :– ಚರ್ಚೆಯಾಗಿಲ್ಲದೆ ಅವರು ಏನು ಉತ್ತರ ಕೊಡುತ್ತಾರೆ?

ಅಧ್ಯಕ್ಷರು :– ಅವರು ಉತ್ತರ ಕೊಡುತ್ತಿಲ್ಲ. ಅವರೇನು ಹೇಳುತ್ತಾರೆ ಕೇಳಿ. ಆಮೇಲೆ ನೀವು ಹೇಳಿ.

ಶ್ರೀ ಬಿ. ಎಸ್. ಯಡಿಯೂರಪ್ಪ :– ಕಲ್ಲಿದ್ದಲು ಖರೀದಿನಲ್ಲಿ ಅವ್ಯವಹಾರ ನಡೆದಿದೆ ಎನ್ನುವ ಗುರುತರವಾದ ಆರೋಪ ಮಾಡಿದ್ದಾರೆ. ನಾನು ನಿಮ್ಮಲ್ಲಿ ವಿನಂತಿ ಮಾಡುತ್ತಿರುವುದು, ಬೇರೆ ಎಲ್ಲಾ ಕಲಾಪವನ್ನು ಬದಿಗೊತ್ತಿ ಅದನ್ನು ಚರ್ಚೆಗೆ ಅವಕಾಶ ಮಾಡಿಕೊಡಬೇಕು. ರೇವಣ್ಣನವರು ಪೂರ್ಣವಾಗಿ ಮಾತನಾಡಿದ ಮೇಲೆ, ನಾನು ಮಾತನಾಡುವಾಗ ಅವರು ಮಧ್ಯದಲ್ಲಿ interfere ಆಗಬಾರದು, ಇದೊಂದೇ ನನ್ನ ಮನವಿ. ನಾನು ನಿಮ್ಮಲ್ಲಿ ರಿಕ್ವೆಸ್ಟ್ ಮಾಡುತ್ತಿದ್ದೇನೆ. ತಾವು ಅಲೌ ಮಾಡಿದಾಗ ನಾವು ಏನು ಬೇಕಾದರೂ ಡೆಮಾಕ್ರಿಸಿಯಲ್ಲಿ ವಿಷಯ ಹೇಳಬೇಕು, ಅವರು ವಿಷಯ ಹೇಳಬೇಕು, ಮಧ್ಯದಲ್ಲಿ ಚರ್ಚೆ, ಕ್ಲಾರಿಫಿಕೇಷನ್ ಇವೆಲ್ಲಾ ಇದ್ದದ್ದೆ. ಆದರೆ, ನನ್ನ ವಿನಂತಿ ಏನೆಂದರೆ, ನನ್ನ ಸದಸ್ಯರಿಗೆ ನಾನು ಹೇಳುತ್ತೇನೆ, ರೇವಣ್ಣನವರು ಏನೇ ವಿಷಯ ಹೇಳುತ್ತಾರೆ ಅವರು ಪೂರ್ಣವಾಗಿ ಹೇಳುವವರೆವಿಗೂ ಮಧ್ಯದಲ್ಲಿ ನಮ್ಮ ಸದಸ್ಯರ್‍ಯಾರು ಮಾತನಾಡಬಾರದು. ನಂತರ ಇದರ ಬಗ್ಗೆ ಸಂಪೂರ್ಣವಾದಂಥ ಉತ್ತರ ಕೊಡುತ್ತೇನೆ. ಈ ಸಂದರ್ಭದಲ್ಲಿ ನೀವ್ಯಾರು ಮಧ್ಯದಲ್ಲಿ interfere ಆಗಬಾರದೆಂದು ಮುಖ್ಯ ಮಂತ್ರಿಯಾಗಿ ನಾನು ತಮ್ಮಲ್ಲಿ ವಿನಂತಿ ಮಾಡಿಕೊಳ್ಳುತ್ತೇನೆ. ಈಗ ಸನ್ಮಾನ್ಯ ರೇವಣ್ಣನವರು ಚರ್ಚೆ ಪ್ರಾರಂಭ ಮಾಡುವುದಕ್ಕೆ ತಾವು ಅವಕಾಶ ಮಾಡಿಕೊಡಿ ಎಂದು ಕೇಳಿಕೊಳ್ಳುತ್ತೇನೆ.

ಶ್ರೀ ಟಿ.ಬಿ. ಜಯಚಂದ್ರ :– ಮಾನ್ಯ ಅಧ್ಯಕ್ಷರೆ, ಮೂರು ದಿವಸಗಳ ಹಿಂದೆ ನಿಲುವಳಿ ಸೂಚನೆಗೆ ಸಂಬಂಧಪಟ್ಟಂತೆ ಪತ್ರ ಕೊಟ್ಟಿದ್ದೇನೆ. ಸದನದಲ್ಲಿ ಈ ವಿಷಯ ಪ್ರಸ್ತಾಪ ಮಾಡಿದ ಹಿನ್ನೆಲೆಯಲ್ಲಿ ಬೇರೆ ಬೇರೆ ವಿಚಾರಗಳು ಬಂದಿದ್ದರಿಂದ ಈ ವಿಷಯವನ್ನು ತೆಗೆದುಕೊಳ್ಳುವುದಕ್ಕೆ ಆಗಲಿಲ್ಲ.

ಅಧ್ಯಕ್ಷರು :– ಮಾನ್ಯ ಜಯಚಂದ್ರರವರೆ, ತಾವು 5 ನಿಮಿಷದಲ್ಲಿ preliminary submission ಅನ್ನು ಮಾಡಿ.

ಶ್ರೀ ಸಿದ್ದುಸವದಿ :– ಮಾನ್ಯ ಅಧ್ಯಕ್ಷರೆ ಬರಗಾಲದ ಬಗ್ಗೆ ನಾವು ಮಾತನಾಡಬೇಕಾಗಿದೆ. ನಮಗೆ ಅವಕಾಶ ಕೊಡಿ.

ಅಧ್ಯಕ್ಷರು :– ಒಂದೊಂದೆ ವಿಷಯವನ್ನು ಮುಗಿಸೋಣ. ಈ ರೀತಿಯಾಗಿ ಏಕೆ ಮಾಡುತ್ತೀರಿ? ಮೊದಲು ಈ ವಿಷಯ ಮುಗಿಯಲಿ. ನಿಲುವಳಿ ಸೂಚನೆ ಬಗ್ಗೆ preliminary submission ಮಾಡುವುದಕ್ಕೆ ಸ್ಪೀಕರ್ ಆಗಿ ನಾನು ಅವಕಾಶ ಕೊಡಬೇಕಾಗುತ್ತದೆ. ನೀವು ದಯವಿಟ್ಟು ಅರ್ಥ ಮಾಡಿಕೊಳ್ಳಿ. ನೀವು ಎಲ್ಲದಕ್ಕೂ ಪದೇ ಪದೇ ಎದ್ದು ನಿಂತರೆ ಹೇಗೆ? ಈ ವಿಷಯ ಮುಗಿದ ಮೇಲೆ

ಹೇಳಿ. ನೆನ್ನೆ ದಿವಸ ಕೂಡ ನಾನು ಅವಕಾಶ ಕೊಟ್ಟಿದ್ದೇನೆ. ಮಾನ್ಯ ಸಿದ್ದುಸವದಿಯವರೆ, ಈ ರೀತಿಯಾಗಿ ಪದೇಪದೇ ಎದ್ದು ನಿಂತರ ಹೇಗೆ? ನೀವು ಎಲ್ಲದಕ್ಕೂ interfere ಆಗುತ್ತಿದ್ದೀರಿ. ನನಗೆ ನಿಜಕ್ಕೂ ಕೂಡ ಅರ್ಥವಾಗುತ್ತಿಲ್ಲ.

ಶ್ರೀ ಟಿ.ಬಿ. ಜಯಚಂದ್ರ :- ಮಾನ್ಯ ಅಧ್ಯಕ್ಷರೆ, ಇವತ್ತಿನದಿವಸ ನಿಲುವಳಿ ಸೂಚನೆಯನ್ನು ನಾವು ತಂದಿದ್ದೇವೆ. ಲೆಕ್ಕಾಚಾರವಾಗಿ ನೋಡಿದರೆ ನಾವು ಪ್ರತಿಪಾದನೆ ಮತ್ತು ಇದರ ಬಗ್ಗೆ ಮಾತನಾಡಬೇಕಾಗಿತ್ತು. ಬರದ ವಿಚಾರ ಇಡೀ ರಾಜ್ಯಕ್ಕೆ ಸಂಬಂಧಪಟ್ಟಿರುವುದರಿಂದ ಎಲ್ಲರೂ ಮಾತನಾಡಲೆಂಬ ದೃಷ್ಟಿ ನಮದಾಗಿತ್ತು. ಇದರ ಬಗ್ಗೆ ಮಾತನಾಡುವುದಕ್ಕೆ ಅವರಿಗೂ ಕೂಡ ಅವಕಾಶ ಇದೆ. ಮತ್ತೆ ತಾವು ಈಗಾಗಲೇ ಅವಕಾಶ ಕೊಟ್ಟಿರುವುದರಿಂದ ಅವರು ಮಾತನಾಡಿದ್ದಾರೆ. ನೆನ್ನೆ ದಿವಸ ಒಂದು ಪ್ರಮುಖವಾದಂಥ ವಿಚಾರವನ್ನು ನಾವು ಪ್ರಸ್ತಾಪ ಮಾಡಬೇಕಾಗಿತ್ತು. ಸಭೆಯ ನಡವಳಿಕೆಗಳು ಬಹಳ ಸುಸೂತ್ರವಾಗಿ ನಡೆಯಬೇಕೆಂದು ಮತ್ತು ಅದರಲ್ಲಿಯೂ ವಿಶೇಷವಾಗಿ ಬರಗಾಲದ ವಿಚಾರ ಚರ್ಚೆ ಮಾಡಬೇಕೆಂಬ ಕಾರಣಕೋಸ್ಕರ ಅವಕಾಶ ನೀಡಲಾಗಿದೆ. ಮತ್ತೆ ನೆನ್ನೆ ದಿವಸ ಮಾನ್ಯ ಮುಖ್ಯ ಮಂತ್ರಿಗಳು ಮತ್ತು ನಮ್ಮ ವಿರೋಧಪಕ್ಷದ ನಾಯಕರು ಇಲ್ಲದೇ ಇರತಕ್ಕಂಥ ಸಂದರ್ಭದಲ್ಲಿ ಇದರ ಬಗ್ಗೆ ಪ್ರಸ್ತಾಪ ಮಾಡೋಣವೆಂದು ನಮ್ಮಲಿಯೇ ಹೊಂದಾಣಿಕೆಯಾಗಿ ನಾವು ಒಂದು ತೀರ್ಮಾನಕ್ಕೆ ಬಂದೆವು. ಆದರೆ, ಆ ತೀರ್ಮಾನದಂತೆ ಇವತ್ತು ನಡೆಯಲಿಲ್ಲ. ನಿಮ್ಮ ಕೊಠಡಿಯಲ್ಲಿ ಕುಳಿತು ಮಾತನಾಡಿದ ಪ್ರಕಾರ ಇವತ್ತು ಪ್ರಸ್ತಾಪ ಮಾಡುವುದಕ್ಕೆ ಅವಕಾಶ ಕೊಡಬೇಕೆಂದು ಕೇಳಿಕೊಂಡಿದ್ದೇವೆ. ಲೋಪವಾಗಿರತಕ್ಕಂತದ್ದು ಏನೆಂದರೆ, ಬರಗಾಲದ ಬಗ್ಗೆ ಚರ್ಚೆಯಾಗಬೇಕು, ಏನೆಂದರೆ, ಇದರ ಬಗ್ಗೆ ಮಾತನಾಡುವುದಕ್ಕೆ ಎಲ್ಲರೂ ಕೂಡ ಕಾಳಜಿ ವಹಿಸಿದ್ದಾರೆ. ಬಹುಶ: ನಾನು ಈ ವಿಷಯ ಪ್ರಸ್ತಾಪ ಮಾಡಿದ ಮೇಲೆ ಬರಗಾಲದ ಬಗ್ಗೆ ಕೂಡ ಚರ್ಚೆ ಮಾಡಬೇಕು. ಇಲ್ಲದಿದ್ದರೆ ಏನಾಗುತ್ತದೆಂದರೆ, ಬರಗಾಲ ongoing. ಆ ವಿಷಯ ಚರ್ಚೆಯಲ್ಲಿದೆ. ಇದನ್ನು ರೂಲ್ 69ಗೆ ಕನ್ವರ್ಟ್ ಮಾಡಿರುವುದರಿಂದ ತಾವು ತದನಂತರ ಇದೇ ವಿಚಾರವನ್ನು ತೆಗೆದುಕೊಳ್ಳುವುದಕ್ಕೆ ಬರುತ್ತದೆ. ಈಗ ಬಹಳ ಮುಖ್ಯವಾಗಿ ಪ್ರಸ್ತಾಪ ಮಾಡಬೇಕಾಗಿರತಕಂಥ ವಿಷಯ ಏನೆಂದರೆ, ವಿಶ್ವ ಬಂಡವಾಳ ಹೂಡಿಕೆದಾರರ ಸಮ್ಮೇಳನಕ್ಕೆ ಸಂಬಂಧಪಟ್ಟಂತೆ ಮುನ್ನೋಟ ಕಾರ್ಯಕ್ರಮವೆಂದು ಮಾನ್ಯ ಮುಖ್ಯ ಮಂತ್ರಿಗಳು ಒಂದು ಸಭೆಯನ್ನು ಕರೆದಿದ್ದಾರೆ. ಇದು ಬಹುಶ: ಸಮಯೋಜಿತ, ಸಂದರ್ಭಾನ್ವಿತ ಅಂದರೆ ಈ ವಿಷಯವನ್ನು ಸರಿಯಾದ ಸಮಯಕ್ಕೆ ಪ್ರಸ್ತಾಪ ಮಾಡುತ್ತಿದ್ದೇನೆಂದು ನಾನು ಭಾವನೆ ಮಾಡಿಕೊಂಡಿದ್ದೇನೆ. ಜಾಗತಿಕ ಮಟ್ಟದಲ್ಲಿ ವಿಶ್ವ ಬಂಡವಾಳ

ಹೂಡಿಕೆದಾರರ ಸಮಾವೇಶವನ್ನು ನಾನು ಸ್ವಾಗತ ಮಾಡುತ್ತೇನೆ. ಏಕೆಂದರೆ ರಾಜ್ಯದ ಅಭಿವೃದ್ಧಿ ದೃಷ್ಟಿಯಿಂದ ಇದು ಆಗಬೇಕಾಗುತ್ತದೆ. ಇವತ್ತಿನದಿವಸ ಆರ್ಥಿಕ ಕುಸಿತವಾಗಿರುವ ಹಿನ್ನೆಲೆಯಲ್ಲಿ ಈ ರೀತಿಯಾದಂಥ ಸಮಾವೇಶಗಳು ಮಾಡತಕ್ಕಂಥದ್ದು ಬಹಳ ಸುಸೂತ್ರವಾಗಿರತಕ್ಕಂಥದೆಂದು ನನ್ನ ಭಾವನೆ. ಕರ್ನಾಟಕ ಬಹಳ ವೇಗವಾಗಿ ಚೇತರಿಸಿಗೊಳ್ಳುವ ಮಟ್ಟದಲ್ಲಿ ಆಗುತ್ತಿದೆ ಎಂದು ಮಾನ್ಯ ಮುಖ್ಯ ಮಂತ್ರಿಗಳು ನೆನ್ನೆದಿವಸ ಮೈಸೂರಿನಲ್ಲಿ ಹೇಳಿದ್ದಾರೆ. ಈ ಒಂದು ಹಿನ್ನೆಲೆಯಲ್ಲಿ ಹೇಳುವುದಾದರೆ ನಮ್ಮ ರಾಜ್ಯಕ್ಕೆ ಬಂಡವಾಳ ಹರಿದು ಬರಬೇಕು. ಬಂಡವಾಳ ನಮ್ಮ ರಾಜ್ಯಕ್ಕೆ ಹರಿದು ಬರುವಾಗ ಎಲ್ಲಿಯೋ ಒಂದು ಕಡೆ ನಿಮ್ಮ ಗಮನಕ್ಕೆ ಬಂದು ಅಥವಾ ಬಾರದೆ ಕೆಲವು ತಪ್ಪುಗಳಾಗಿರುವಂಥದ್ದನ್ನು ನಿಮ್ಮ ಗಮನಕ್ಕೆ ತರತಕ್ಕಂಥದ್ದು ನಮ್ಮ ಜವಾಬ್ದಾರಿಯಾಗಿದೆ. ಬಹುಶ: ಈ ವಿಚಾರವನ್ನು ಪ್ರಸ್ತಾಪ ಮಾಡುವುದರಿಂದ ಸರ್ಕಾರ ನಡೆಸುತ್ತಿರುವಂಥ ಮಾನ್ಯ ಮುಖ್ಯ ಮಂತ್ರಿಯವರಿಗೆ ಇದರಿಂದ ಹೆಚ್ಚು ಸಹಾಯವಾಗುತ್ತದೆಂದು ನಾನು ಭಾವಿಸಿದ್ದೇನೆ. ಇವತ್ತಿನ ದಿವಸ ಲ್ಯಾಂಡ್ ಅಕ್ವೈರ್ ಮಾಡಿ ಅದನ್ನು ಮಂಜೂರು ಮಾಡುವಂಥ ಸಂದರ್ಭದಲ್ಲಿ ಯಾವ್ಯಾವ ಮಾನದಂಡಗಳನ್ನು ಇಟ್ಟುಕೊಂಡು ಮಾಡಲಾಗಿದೆ ಎಂಬುದಕ್ಕೆ ನಿಯಮಾವಳಿಗಳು ಮತ್ತು ಕಾನೂನು ಇದೆ. ಆದರೆ, ಇವೆಲ್ಲವನ್ನು ಮೀರಿ ತಪ್ಪಾಗಿರುವಂಥ ಸನ್ನಿವೇಶಗಳು ಅನೇಕ ಕಡೆ ಇವೆ. ಇದರಿಂದ ಸರ್ಕಾರದ ಬೊಕ್ಕಸಕ್ಕೆ ನಾವು ಕಂಡಂತೆ ಕೋಟ್ಯಾಂತರ ರೂಪಾಯಿ ನಷ್ಟವಾಗುತ್ತಿದೆ. ಬಹುಶ: ನಾನು ಪ್ರಸ್ತಾಪಮಾಡುವಂಥದರಲ್ಲಿ ಮೇಲ್ನೋಟಕ್ಕೆ ಕಂಡಂತೆ ಸುಮಾರು 200–300 ಕೋಟಿ ರೂಪಾಯಿ ನಷ್ಟವಾಗಿರುವಂಥ ನಿದರ್ಶನಗಳು ನಮ್ಮ ಹತ್ತಿರ ಇವೆ. ಮಾನ್ಯ ಅಧ್ಯಕ್ಷರೆ, ನಿಮ್ಮ ಮತಕ್ಷೇತ್ರವಾದ ಧಾರವಾಡಕ್ಕೆ ಸಂಬಂಧಪಟ್ಟಿರುವ ಬೇಲೂರು ಇಂಡಸ್ಟ್ರೀಯಲ್ ಎಸ್ಟೇಟ್‌ನಲ್ಲಿ ಆಗಿರುವ ವ್ಯತ್ಯಾಸ ಮತ್ತು ಬೆಂಗಳೂರು ಇಂಡಸ್ಟ್ರಿಯಲ್ ಎಸ್ಟೇಟ್‌ನಲ್ಲಿ ಆಗಿರುವ ವ್ಯತ್ಯಾಸಗಳೂ ಏನಿವೆ ಅವುಗಳನ್ನು ನಮ್ಮ ನಿಯಮಾವಳಿ ಅಥವಾ ಕಾನೂನುಗಳನ್ನು ಯಾವ ರೀತಿಯಾಗಿ ಗಾಳಿಗೆ ತೂರಿ ಮಂಜೂರಾತಿ ಮತ್ತು ಅಕ್ವೈರ್ ಮಾಡಿದ್ದಾರೆಂಬ ವಿಚಾರವನ್ನು ಪ್ರಸ್ತಾಪ ಮಾಡುವುದಕ್ಕೋಸ್ಕರ ಇವತ್ತು ತಮ್ಮ ಗಮನವನ್ನು ಸೆಳೆಯುವುದಕ್ಕೆ ಬಯಸುತ್ತೇನೆ. ಇದರ ಬಗ್ಗೆ ಚರ್ಚೆ ಮಾಡುವುದಕ್ಕೆ ದಯಮಾಡಿ ನನಗೆ ಅವಕಾಶ ಕೊಡಬೇಕೆಂಬ ಮನವಿಯನ್ನು ಈ ಸಂದರ್ಭದಲ್ಲಿ ಮಾಡುವುದಕ್ಕೆ ಇಷ್ಟಪಡುತ್ತೇನೆ. ವಿಷಯದ ಬಗ್ಗೆ ಹೆಚ್ಚು ಹೋಗದೇ ಪ್ರಾಸ್ತಾವಿಕವಾದಂಥ ವಿಚಾರವನ್ನು ಪ್ರಸ್ತಾಪ ಮಾಡುತ್ತೇನೆ. ಇದಕ್ಕೆ ತಮ್ಮ ಅನುಮತಿ ಇದ್ದರೆ ಈ ನಿಮಿಷದಲ್ಲಿಯೇ ಚರ್ಚೆ ಮಾಡುವುದಕ್ಕೆ ನಾನು

ತಯಾರಿದ್ದೇನೆ. ಮಾನ್ಯ ಮುಖ್ಯಮಂತ್ರಿಗಳು ಹಾಕಿಕೊಂಡಿರುವ ಕಾರ್ಯಕ್ರಮದ ಹಿನ್ನಲೆಯಲ್ಲಿ ಇದು ಬಹಳ ಮಹತ್ವದ ವಿಚಾರವಾಗಿದೆ ಎಂಬ ಮಾತನ್ನು ಹೇಳುತ್ತಾ ಇದಕ್ಕೆ ಸಭಾನಾಯಕರು ಒಪ್ಪಿಗೆ ಕೊಡಬೇಕೆಂದು ಕೇಳಿಕೊಳ್ಳುತ್ತೇನೆ. ಇದರಲ್ಲಿ ನಿಮಗೆ ಗೊತ್ತಿಲ್ಲದೆ ಆಗಿರುವ ತಪ್ಪುಗಳು ಏನೆಂಬುದನ್ನು ನಿಮಗೂ ಕೂಡ ಅರಿವಾಗಬೇಕೆಂಬ ದೃಷ್ಟಿಯಿಂದ ಪ್ರಸಾಪ ಮಾಡುವುದಕ್ಕೆ ಅವಕಾಶ ಕೇಳುತ್ತಿದ್ದೇನೆ.

ಶ್ರೀ ಬಿ. ಎಸ್. ಯಡಿಯೂರಪ್ಪ (ಮುಖ್ಯ ಮಂತ್ರಿಗಳು) :– ಮಾನ್ಯ ಅಧ್ಯಕ್ಷರೆ, ಬಹಳ ಗಹನವಾದಂಥ ವಿಚಾರವನ್ನು ಪ್ರತಿಪಕ್ಷದ ಉಪನಾಯಕರಾಗಿರುವ ಮಾನ್ಯ ಜಯಚಂದ್ರರವರು ಪ್ರಸ್ತಾಪ ಮಾಡಿದ್ದಾರೆ. ನಿಮಗೆ ಈಗಾಗಲೇ ಗೊತ್ತಿರುವ ಹಾಗೆ Global Investor's Meet ಕೇವಲ ನಾಮಕಾವಸ್ತೆಯಾಗದೆ ಬಂಡವಾಳ ಹೂಡಿಕೆದಾರರಿಗೆ ಇಲ್ಲಿ ಏನೇನು ಅವಕಾಶಗಳಿವೆ ಎಂದು ಮತ್ತು ನಾವು ಇಲ್ಲಿ ಮೂಲಭೂತ ಸೌಕರ್ಯಗಳನ್ನು ಏನೇನು ಡೆವಲಪ್ ಮಾಡಿದ್ದೇವೆಂದು ಮತ್ತು ಅವರು ಬರುತ್ತೇವೆಂದು ಹೇಳಿದ ಕೆಲವೇ ದಿವಸಗಳಲ್ಲಿ ಅವರಿಗೆ ಲ್ಯಾಂಡ್, ಪವರ್, ವಾಟರ್ ವ್ಯವಸ್ಥೆಗಳನ್ನು ಮಾಡಿ ಬಂಡವಾಳ ಹೂಡಿಕೆದಾರರನ್ನು ಆಕರ್ಷಿಸಬೇಕೆಂಬ ಚಿಂತನೆ ಇದೆ. ಈ ಹಿನ್ನಲೆಯಲ್ಲಿ ಒಂದೆರಡು ತಂಡಗಳನ್ನು ಮಾಡಿ ಜಗತ್ತಿನ ಬೇರೆ ಬೇರೆ ಅಂದರೆ ಮುಂದುವರಿದ ಮತ್ತು ಬಂಡವಾಳ ಹೂಡಿಕೆ ಮಾಡುವಂಥ ದೇಶಗಳಿಗೆ ಸಚಿವರುಗಳು ಮತ್ತು ಅಧಿಕಾರಿಗಳು ಹೋಗಿ ನಮ್ಮ ವಿಚಾರವನ್ನು ಅವರಿಗೆ ಮನದಟ್ಟು ಮಾಡಿ ದೊಡ್ಡ ಪ್ರಮಾಣದಲ್ಲಿ ಬಂಡವಾಳ ಹೂಡಿಕೆದಾರರನ್ನು ಆಕರ್ಷಣೆ ಮಾಡಬೇಕೆಂಬ ಉದ್ದೇಶ ಇದೆ. ಮತ್ತೆ ಇದಕ್ಕೆ ನಿಮ್ಮೆಲ್ಲರ ಸಹಕಾರ ಕೂಡ ಬೇಕು. ಬೆಂಗಳೂರಿನಲ್ಲಿರುವಂತ ದೊಡ್ಡ ದೊಡ್ಡ ಹೂಡಿಕೆದಾರರು ಇಡೀ ಜಗತ್ತಿನಲ್ಲಿ ಒಂದಲ್ಲಾ ಒಂದು ರೀತಿಯಲ್ಲಿ ಅವರುಗಳಿಗೆ ಪರಿಚಯ ಇದೆ. ಮತ್ತೆ ಅವರುಗಳು ಬೇರೆ ಕಡೆ ವ್ಯವಹಾರವನ್ನು ನಡೆಸುತ್ತಿದ್ದಾರೆ. ಇವರೆಲ್ಲರ ಸಹಕಾರವನ್ನು ನಾನು ಬೇಡಿದ್ದೇನೆ. ಮತ್ತೆ ಅವರ ಜೊತೆ ಸಮಾಲೋಚನೆ ಮಾಡಿದ್ದು ಎಲ್ಲರೂ ಸಹ ಸಂಪೂರ್ಣ ಸಹಕಾರವನ್ನು ಕೊಡುತ್ತೇನೆಂದು ಒಪ್ಪಿಕೊಂಡಿದ್ದಾರೆ. ಈ ಸಂದರ್ಭದಲ್ಲಿ ಕಾನೂನು ಚೌಕಟ್ಟಿನೊಳಗೆ ಏನಾದರೂ ತಪ್ಪಾಗಿದ್ದರೆ ಅಥವಾ ರೈತರಿಗೆ ಇದರಿಂದ ಅನ್ಯಾಯವಾಗಿದ್ದರೆ ಅಥವಾ ಅದರಲ್ಲಿ ನಮ್ಮ ಉದ್ದೇಶ ಬೇರೆ ಏನಾದರು ಇದ್ದರೆ ಅಂದರೆ ಸ್ವಂತ ಲಾಭ ಮಾಡುಕೊಳ್ಳುವಂಥ ಅಥವಾ ಬೇರೆ ಏನಾದರು ಉದ್ದೇಶ ಇದ್ದರೆ ಖಂಡಿತ ಒಂದಲ್ಲ ಈ ರೀತಿಯಾದ 10 ವಿಷಯಗಳ ಬಗ್ಗೆ ಚರ್ಚೆ ಮಾಡೋಣ. ಮುಕ್ತ ಮನಸ್ಸಿನಿಂದ ನಾನು ನಿಮ್ಮ ಜೊತೆ ಇದ್ದೇನೆಂದು ಹೇಳುವುದಕ್ಕೆ ಬಯಸುತ್ತೇನೆ.

ತಪ್ಪು ಅಥವಾ ಕೊರತೆಗಳಾಗಿದ್ದರೆ ಅದನ್ನು ಸರಿಪಡಿಸುವುದಕ್ಕೂ ಕೂಡ ನಾನು ಸಿದ್ಧನಾಗಿದ್ದೇನೆ. ನಾವ್ಯಾರು ಡಿಕ್ಟೇಟರ್ಸ್ ಅಲ್ಲ. ಜನರ ಕಸ್ಟೋಡಿಯನ್ ಆಗಿ ಇಲ್ಲಿಗೆ ಬಂದಾಗ ಎಲ್ಲರ ಹಿತದೃಷ್ಟಿಯಿಂದ ಚರ್ಚೆ ಮಾಡಿದಾಗ ಕೆಲವು ಕೊರತೆಗಳು ಆಗಿರಬಹುದು, ಇಲ್ಲವೆಂದು ನಾನು ಹೇಳುವುದಿಲ್ಲ. ಆದರೆ, ಅದರ ಉದ್ದೇಶ ಏನೆಂಬುದು ಬಹಳ ಮುಖ್ಯವಾಗುತ್ತದೆ. ನಿಮ್ಮಂಥ ಹಿರಿಯ ಸದಸ್ಯರಿಗೆ ನಾನು ಹೇಳುವಂಥ ಅಗತ್ಯ ಇಲ್ಲ. ಚರ್ಚೆ ನಂತರ ನೀವೇ ಒಪ್ಪಿಕೊಳ್ಳುತ್ತೀರೆಂದು ನಾನು ಭಾವಿಸಿದ್ದೇನೆ. ಅಥವಾ ಸರಿಯಾಗಿಲ್ಲದಿದ್ದರೆ ಅದನ್ನು ಸರಿಪಡಿಸಿಕೊಳ್ಳುವುದಕ್ಕೆ ನಾನು ಸಿದ್ಧನಿದ್ದೇನೆ. ಮಾನ್ಯ ಜಯಚಂದ್ರರವರೆ, ನನ್ನ ನೋವು ಏನೆಂದರೆ, ಈ ಸಾರಿ ಬಹಳ ಗಂಭೀರವಾದಂಥ ಚರ್ಚೆ ಇಲ್ಲಿ ಆಗಿದೆ. ನನಗೆ ಆಗಿರುವಷ್ಟು ಆನಂದ ಮತ್ತು ನಿಮ್ಮಂಥವರಿಗೆ ಆಗಿರುವಷ್ಟು ಆನಂದ ಬೇರೆಯಾರಿಗೂ ಸಹ ಆಗಿಲ್ಲ. ಏಕೆಂದರೆ, 14–15 ತಿಂಗಳ ನಂತರ ನಿಮ್ಮೆಲ್ಲರ ಸಹಕಾರದಿಂದ ಅನೇಕ ಗಂಭೀರವಾದಂಥ ವಿಷಯಗಳು ಇಲ್ಲಿ ಚರ್ಚೆಯಾಗಿವೆ. ಮಾಧ್ಯಮದಲ್ಲಿಯೂ ಸಹ editorials ಬರುತ್ತಿವೆ. ಸರಿ ತಪ್ಪುಗಳ ಬಗ್ಗೆ ಚರ್ಚೆಯಾಗುತ್ತಿವೆ. ಮತ್ತೆ ಚಿಂತನ ಮಂಥನ ಆಗುತ್ತಿದೆ ಮತ್ತೆ ಸಾರ್ವಜನಿಕರು ಇದರ ಬಗ್ಗೆ ಆಸಕ್ತಿ ತೋರಿಸುತ್ತಿದ್ದಾರೆ. ಒಂದು ರೀತಿಯಲ್ಲಿ ಏನೋ ಒಂದು ಬದಲಾವಣೆಯನ್ನು ನಾವು ಕಾಣುತ್ತಿದ್ದೇವೆ. ಕೊರತೆಗಳನ್ನು ನಿವಾರಿಸಕೊಂಡು ನಾವು ಮುಂದಕ್ಕೆ ಹೋಗಬೇಕು. ರಾಜ್ಯದ ಉದ್ದಗಲಕ್ಕೂ ಕಲ್ಲಿದ್ದಲಿನ ಅವ್ಯವಹಾರ ನಡೆದಿದೆ ಎಂದು ಮತ್ತು ಮಾನ್ಯ ರೇವಣ್ಣನವರ ಪ್ರಕಾರ ಕೆಪಿಸಿಯಲ್ಲಿ 6 ಲಕ್ಷ ಟನ್ ಕಲ್ಲಿದ್ದಲಿನ ಖರೀದಿಯಲ್ಲಿ 477 ಕೋಟಿ ನಷ್ಟವಾಗಿದೆ ಎಂದು ಹೇಳಿದ್ದಾರೆ. ಆದರೆ, 6 ಲಕ್ಷ ಟನ್ ಖರೀದಿಗೆ ನಾವು ಅವರಿಗೆ ಕೊಟ್ಟಿರುವುದೆ 477 ಕೋಟಿ. ಆದರೆ ಅವರ ಪ್ರಕಾರ 477 ಕೋಟಿ ಲುಕ್ಸಾನ್ ಆಗಿದೆ ಎಂದು ಹೇಳುತ್ತಿದ್ದಾರೆ. ಇದರ ವಿವರಕ್ಕೆ ನಾನು ಹೋಗುವುದಿಲ್ಲ. ಸನ್ಮಾನ್ಯ ರೇವಣ್ಣನವರು ಚರ್ಚೆಯನ್ನು ಪ್ರಾರಂಭ ಮಾಡಲಿ ಈ ವಿಷಯ ಮುಗಿದ ಮೇಲೆ ಯಾವುದಕ್ಕೆ ಆದ್ಯತೆಯನ್ನು ಮಾನ್ಯ ಅಧ್ಯಕ್ಷರು ಕೊಡುತ್ತಾರೆಯೊ ಅದಕ್ಕೆ ನಾನು ಸಿದ್ಧನಿದ್ದೇನೆಂದು ಹೇಳುವುದಕ್ಕೆ ಬಯಸುತ್ತೇನೆ.

ಅಧ್ಯಕ್ಷರು:– ಮಾನ್ಯ ಜಯಚಂದ್ರರವರೆ, ನಾನು ನಿಮಗೆ ಹೇಳುವುದೇನೆಂದರೆ, ತಾವು ಮತ್ತು ಇತರೇ ಗೌರವಾನ್ವಿತ ಸದಸ್ಯರು ಈಗ ನಿಲುವಳಿ ಸೂಚನೆ ತೆಗೆದುಕೊಂಡು ಬಂದಿದ್ದೀರಿ. ಈ ವಿಷಯ ಬಹಳ ಮಹತ್ವದಾಗಿದೆ. ಆದ್ದರಿಂದ, ಇದರ ಬಗ್ಗೆ ಚರ್ಚೆ ಮಾಡುವುದಕ್ಕೆ ನಾನು ತಯಾರಿದ್ದೇನೆಂದು ಸರ್ಕಾರದ ಪರವಾಗಿ ಮಾನ್ಯ ಮುಖ್ಯಮಂತ್ರಿಗಳು ಒಪ್ಪಿಕೊಂಡಿದ್ದಾರೆ. ರೂಲ್ 60 ಮೇಲೆ ತಂದಿರುವ ನಿಲುವಳಿ ಸೂಚನೆಯನ್ನು

ರೂಲ್ 69ಕ್ಕೆ ಕನ್ವರ್ಟ್ ಮಾಡಿ ಚರ್ಚೆ ಮಾಡುವುದಕ್ಕೆ ಅವಕಾಶ ಕೊಡುತ್ತೇನೆ. ಇವತ್ತು ಮಧ್ಯಾಹ್ನ 3.00 ಗಂಟೆಗೆ ಇದರ ಮೇಲೆ ಚರ್ಚೆ ಮಾಡಲು ಸಮಯವನ್ನು ನಿಗದಿ ಮಾಡಿದ್ದೇನೆ.

ಶ್ರೀ ಟಿ. ಬಿ. ಜಯಚಂದ್ರ :- ಮಾನ್ಯ ಅಧ್ಯಕ್ಷರೆ, ಬರಗಾಲದ ಚರ್ಚೆಗೂ ಕೂಡ ಆದ್ಯತೆ ಕೊಡಬೇಕಾಗುತ್ತದೆ. ಏಕೆಂದರೆ, ಬರಗಾಲದ ಬಗ್ಗೆ ಈಗಾಗಲೇ ಸಾಕಷ್ಟು ಜನ ಮಾತನಾಡಿದ್ದಾರೆ. ಇನ್ನು ಒಬ್ಬಿಬ್ಬರು ಮಾತನಾಡಿದ ನಂತರ ಮಾನ್ಯ ಮುಖ್ಯ ಮಂತ್ರಿಗಳು ಉತ್ತರ ಕೊಡಲಿ.

ಅಧ್ಯಕ್ಷರು :- ಮೊದಲು ಆ ವಿಷಯನ್ನು ಮುಗಿಸೋಣ. ಮಾನ್ಯ ರೇವಣ್ಣನವರೆ ತಾವು ಪ್ರಾರಂಭ ಮಾಡಿ.

ಶ್ರೀ ಬಿ. ಎಸ್. ಯಡಿಯೂರಪ್ಪ :- ತಾವು ಹೇಳಿದ ವಿಚಾರದ ಬಗ್ಗೆ ಚರ್ಚೆ ಮಾಡೋಣ. ಮೊದಲು ಮಾನ್ಯ ರೇವಣ್ಣನವರು ಚರ್ಚೆ ಪ್ರಾರಂಭ ಮಾಡಲೆಂದು ನಾನು ರಿಕ್ವೆಸ್ಟ್ ಮಾಡಿಕೊಳ್ಳುತ್ತೇನೆ. ಬರದ ಮಹತ್ವ ನನಗೂ ಕೂಡ ಅರ್ಥವಾಗಿದೆ. ಇವತ್ತು ಆ ವಿಷಯ ಚರ್ಚೆ ಮಾಡಲು ದಯಮಾಡಿ ನನಗೆ ಸಹಕಾರ ಕೊಡಿ. ಮಾನ್ಯ ರೇವಣ್ಣನವರು ಚರ್ಚೆ ಪ್ರಾರಂಭ ಮಾಡಲಿ.

ಶ್ರೀ ಟಿ.ಬಿ. ಜಯಚಂದ್ರ :- ನನ್ನ ಅಭಿಪ್ರಾಯ ಏನೆಂದರೆ, ಇಡೀ ದಿವಸ ಅದಕ್ಕೆ ಹೋಗುತ್ತದೆ. ಇವತ್ತು ಸದನ ಕೊನೆಯದಿನವಸ ಇರುವುದರಿಂದ ಚರ್ಚೆ ಆಗಬೇಕು. ನೆನ್ನೆ ಅರ್ಧ ದಿವಸ ಸದನ ಸಮಯ ಹೋಗಿದೆ. ಅದು ಯಾರಿಂದ ಆಯಿತೆಂಬ ಪ್ರಶ್ನೆ ಬೇರೆ. ಇದು ಮಾನ್ಯ ಅಧ್ಯಕ್ಷರಿಗೂ ಸಹ ಗೊತ್ತಿದೆ. ನಿನ್ನೆ ಅರ್ಧ ದಿವಸ ಸದನದ ಸಮಯವನ್ನು ತಿಂದು ಹಾಕಿರುವ ಹಿನ್ನಲೆಯಲ್ಲಿ ಅದು ಮರುಕಳಿಸಬಾರದು.

ಶ್ರೀ ಬಿ.ಎಸ್. ಯಡಿಯೂರಪ್ಪ (ಮುಖ್ಯಮಂತ್ರಿಗಳು) :- ಮಾನ್ಯ ಅಧ್ಯಕ್ಷರೆ, ಮಾನ್ಯ ರೇವಣ್ಣನವರಿಗೆ ಎಷ್ಟು ಸಮಯ ಬೇಕು ಕೇಳಿ ಅವರಿಗೆ ಹೇಳಿ. ನನಗೆ ಎಷ್ಟು ಸಮಯ ಕೊಡುತ್ತೀರಿ ಅಷ್ಟು ಸಮಯದಲ್ಲಿ ನಾನು ಉತ್ತರವನ್ನು ಕೊಡುತ್ತೇನೆ. ಸರ್ ಸಮಯವನ್ನು ನಿಗದಿ ಮಾಡಿ. ಪಾರ್ಲಿಮೆಂಟಿನಲ್ಲಿ ಒಂದು ನಿಶ್ಚಿತ ಸಮಯವನ್ನು ಕೊಟ್ಟು ಮಾತನಾಡಲಿಕ್ಕೆ ಮಾಡುತ್ತಾರೆ. ಇಲ್ಲಿ ಆ ಪದ್ಧತಿಯನ್ನು ಮಾಡೋಣ. ರೇವಣ್ಣನವರಿಗೆ ಎಷ್ಟು ಸಮಯ ಬೇಕು ಕೇಳಿ ಸರ್, ಮಧ್ಯದಲ್ಲಿ ನಾನು ಯಾರು ಃಟಿಣಜಡಿಜಿಜಡಿಜ ಆಗುವುದಿಲ್ಲ. ಅವರು ಏನು ಹೇಳಬೇಕು ಹೇಳಲಿ, ಆಮೇಲೆ ನನಗೆ ಎಷ್ಟು ಸಮಯ ಕೊಡುತ್ತೀರಿ ಅಷ್ಟರಲ್ಲಿ ನಾನು ನನ್ನ ಉತ್ತರವನ್ನು ಕೊಡುತ್ತೇನೆ.

ಅಧ್ಯಕ್ಷರು :- ರೇವಣ್ಣನವರ ವಿಷಯಕ್ಕೆ ಮಾನ್ಯ ಮುಖ್ಯಮಂತ್ರಿಗಳು ಒಪ್ಪಿದ್ದಾರೆ.

ಶ್ರೀ ಟಿ. ಬಿ. ಜಯಚಂದ್ರ :- ಮಾನ್ಯ ಅಧ್ಯಕ್ಷರೆ, ಮಾನ್ಯ ಮುಖ್ಯಮಂತ್ರಿಗಳು ಒಪ್ಪಿರುವುದರಿಂದ ಕಾಲವನ್ನು ನಿಗದಿ ಮಾಡಿ. ಒಂದು ಚೌಕಟ್ಟಿನಲ್ಲಿ ನಮ್ಮ ನಡವಳಿಕೆಗಳು ಬರಲಿ. ಈಗ ನಮ್ಮಲ್ಲಿ ಏನಾಗಿದೆ ಎಂದರೆ, ಯಾವ ವಿಚಾರಕ್ಕೆ ಎಷ್ಟು ಮಹತ್ವ ಕೊಡಬೇಕು ಏನು ಎನ್ನುವುದೆ ಇಲ್ಲ. ಮಾನ್ಯ ಶ್ರೀನಿವಾಸ್ ಪ್ರಸಾದರವರು ಕೇಳುತ್ತಿದ್ದರು. ಅವರು ಸಾಕಷ್ಟು ಸಮಯ ಪಾರ್ಲಿಮೆಂಟಿನಲ್ಲಿದ್ದವರು, ಕ್ಲಾರಿಫಿಕೇಶನ್‌ನ್ನು 50 ಜನ 25 ಜನ ಕೇಳುವುದಕ್ಕೆ ಹೋದರೆ ಎಷ್ಟು ಸಮಯವಾಗುತ್ತದೆ. ನಾವು ಎಲ್ಲೋ ಒಂದು ಕಡೆ ನಿಯಮಗಳ ಚೌಕಟ್ಟಿನಲ್ಲಿ ಕೆಲಸ ಮಾಡಿದರೆ ಅದಕ್ಕೆ ಒಂದು ಅರ್ಥ ಬರುತ್ತದೆಂದು ನಾನು ಹೇಳುತ್ತೇನೆ.

ಅಧ್ಯಕ್ಷರು :- ಅದಕ್ಕಾಗಿ ನಾನು ಪದೆ ಪದೆ ಹೇಳುತ್ತಿರುತ್ತೇನೆ. ಸದಸ್ಯರುಗಳು ಒಂದು ಸಮಯವನ್ನು ನಿಗದಿ ಮಾಡಿಕೊಳ್ಳಿ.

ಶ್ರೀ ಟಿ. ಬಿ. ಜಯಚಂದ್ರ :- ಕಾಲವನ್ನು ನಿಗದಿ ಮಾಡಬೇಕು ಎಂದಿರುವುದಕ್ಕೆ ನಾನು ಈ ಮಾತನ್ನು ಹೇಳಬೇಕಾಯಿತು. ದಯಮಾಡಿ ಅದನ್ನು ಗಮನದಲ್ಲಿಟ್ಟುಕೊಂಡು ಮಾತನಾಡಬೇಕು.

ಅಧ್ಯಕ್ಷರು :- ಯಾವುದೇ ಒಂದು ವಿಷಯ ಬಂದಾಗ, ನಿಯಮ 69ಕ್ಕೆ ಛಿಂಟಿತಜಡಿಣ ಮಾಡುತ್ತೇನೆ. ಬರಗಾಲ ವಿಷಯ ಬಂದಾಗ, ಮೊನ್ನೆ ಕೃಷಿಯ ವಿಷಯ ಬಂತು, ಅದಕ್ಕಾಗಿ ನೀವು ನಿಮ್ಮ ಪಕ್ಷದಲ್ಲಿ ಒಂದು ಚಿಂತನೆಯನ್ನು ಮಾಡಿ 10 ಜನ ಶಾಸಕರು ಈ ವಿಷಯದ ಮೇಲೆ ಮಾತನಾಡಲಿ, ಬರಗಾಲ ವಿಷಯಕ್ಕೆ ಸಂಬಂಧಪಟ್ಟಂತೆ 10 ಜನ ಶಾಸಕರು ಮಾತನಾಡಲಿ. ಆ ಮೇಲೆ ಯಾವುದೇ ಒಂದು ರೂಲ್ 69ನ ಮೇಲೆ ಕಲ್ಲಿದ್ದಲು ವಿಷಯ ಈಗ ಬಂತು, ಮಾನ್ಯ ರೇವಣ್ಣನವರು ಮಾತನಾಡಿದ ಮೇಲೆ ಅದು ಮುಗಿಯಿತು. ಮತ್ತೆ ಅದರ ಮೇಲೆ 8 ಜನ ಮಾತನಾಡಿದರೆ ಅದಕ್ಕೆ ಅರ್ಥ ಏನಿದೆ? ಈ ರೀತಿ ಒಂದು ಹೊಂದಾಣಿಕೆ ಮಾಡಿದರೆ ಬಹಳಷ್ಟು ವಿಷಯಗಳನ್ನು ಚರ್ಚೆ ಮಾಡಲಿಕ್ಕೆ ಅವಕಾಶ ಸಿಗುತ್ತದೆ. ಬಹಳಷ್ಟು ಜನ ಶಾಸಕರು ಇನ್‌ವಾಲ್ವ್ ಆಗುವುದಕ್ಕೆ ಸಾಧ್ಯವಿದೆ. ಸರ್ಕಾರದಿಂದ ಸರಿಯಾದ ಒಂದು ಉತ್ತರ ಕೂಡ ಬರುವುದಕ್ಕೆ ಸಾಧ್ಯವಿದೆ. ಪ್ರತಿಯೊಂದು ವಿಷಯಕ್ಕೂ ಎಲ್ಲರೂ ಮಾತನಾಡುತ್ತೇವೆಂದರೆ ಯಾರಿಗೂ ಅವಕಾಶ ಕೊಡುವುದಕ್ಕೆ ಸಾಧ್ಯವಿಲ್ಲ, ಇರುವ ಸಮಯದಲ್ಲಿ ಲಿಮಿಟ್ ಹಾಕಿಕೊಳ್ಳಬೇಕು. ಆ ದೃಷ್ಟಿಕೋನದಿಂದ ಎಲ್ಲರ ಸಹಕಾರ ಇದಕ್ಕೆ ಬೇಕು.

ಶ್ರೀ ಟಿ. ಬಿ. ಜಯಚಂದ್ರ :- ಆ ಅಧಿಕಾರ ತಮಗೆ ಇದೆ.

ಅಧ್ಯಕ್ಷರು :– ಅಧಿಕಾರ ಇದ್ದರೂ ನಿಮ್ಮ ಸಹಕಾರ ಇಲ್ಲದಿದ್ದರೆ ನಾನು ಏನು ಮಾಡುವುದಕ್ಕಾಗುವುದಿಲ್ಲ. ಅಧಿಕಾರವನ್ನು ಉಪಯೋಗ ಮಾಡಿದರೆ ಅದು ಒಂದು ತರಹ ಆಗುತ್ತದೆ.

ಶ್ರೀ ಟಿ. ಬಿ. ಜಯಚಂದ್ರ :– ಅಧಿಕೃತ ಒಂದು ರಾಜಕೀಯ ಪಕ್ಷವಾಗಿ ನಮ್ಮ ವಿಚಾರಧಾರೆಗಳು ಏನೆಂದರೆ, ವಿಶೇಷವಾಗಿ ಚರ್ಚೆಯಾಗಬೇಕು. ಅರ್ಥಪೂರ್ಣವಾಗಿ ಚರ್ಚೆಯಾಗಬೇಕು, ಸರ್ಕಾರದಿಂದು ಉತ್ತರ ಬರಬೇಕು. ಸರ್ಕಾರ ತಪ್ಪು ಮಾಡಿದರೆ ಟೀಕೆ ಮಾಡುವುದಕ್ಕೆ ಅವಕಾಶ ಇರಬೇಕೆನ್ನುವಂಥದ್ದು.

ಶ್ರೀ ವಿ. ಶ್ರೀನಿವಾಸ್ ಪ್ರಸಾದ್ (ನಂಜನಗೂಡು) :– ಮಾನ್ಯ ಅಧ್ಯಕ್ಷರೆ, ನಾನು ಒಂದು ವಿಷಯವನ್ನು ಸಬ್‌ಮಿಷನ್ ಮಾಡುವುದಕ್ಕೆ ದಯಮಾಡಿ ಅವಕಾಶವನ್ನು ಮಾಡಿ ಕೊಡಿ. ಮಾನ್ಯ ಮುಖ್ಯಮಂತ್ರಿಗಳು ವಿಶೇಷ ಅಧಿವೇಶನದ ಬಗ್ಗೆ ಬಹಳ ಮುಖ್ಯವಾಗಿ ಒಂದು ವಿಷಯವನ್ನು ಪ್ರಸ್ತಾಪ ಮಾಡಿದ್ದಾರೆ. ತಮ್ಮ ಪ್ರಾಸ್ತಾವಿಕ ನುಡಿಗಳಲ್ಲಿ ಬಹುಶ: ವಿಶೇಷ ಅಧಿವೇಶನ ಅಥವಾ ಮುಂದುವರೆದ ಅಧಿವೇಶನವೆಂದು ಏನು ಹೇಳುತ್ತಿದ್ದೀರಿ. ಬಹುಶ: ಈ ತರಹದ ಅಧಿವೇಶನ ದೇಶದ ಶಾಸಕಾಂಗ ಇತಿಹಾಸದಲ್ಲಿ ಮೊಟ್ಟಮೊದಲನೆಯದಾಗಿ ಕರೆದಿರುವಂಥ ಒಂದು ವಿಶೇಷವಾದ ಈ ಅಧಿವೇಶನ. ಈ ಅಧಿವೇಶನವನ್ನು ಕರೆದ ನಂತರ ಇಲ್ಲಿ ನಾವು ಕೃಷಿ ಮತ್ತು ಗ್ರಾಮೀಣಾಭಿವೃದ್ಧಿಯ ವಿಷಯಗಳ ಬಗ್ಗೆ ಚರ್ಚೆ ಮಾಡಬೇಕು. ಪ್ರಾರಂಭದಲ್ಲಿ ನೀವು ಮೂರು ದಿವಸಗಳ ಕಾಲ ಚರ್ಚೆಯಾಗಬೇಕೆಂದು ಹೇಳುತ್ತಿದ್ದೀರಿ, ಶುಕ್ರವಾರ ಮಧ್ಯಾಹ್ನ ಇದು ಮುಗಿಯಬೇಕೆಂದು ಹೇಳುತ್ತಿದ್ದೀರಿ. ಇಲ್ಲಿ ಎಲ್ಲಾ ಸದಸ್ಯರ ಭಾವನೆಗಳನ್ನು ಅರ್ಥಮಾಡಿಕೊಂಡು ತಾವೆಲ್ಲರೂ ಇದು ಬಹಳ ಮುಖ್ಯವಾದ ವಿಷಯ ನಾವೆಲ್ಲರೂ ಕೂಡ ಈ ಚರ್ಚೆಯಲ್ಲಿ ಭಾಗವಹಿಸಬೇಕೆಂದು ಹೇಳುತ್ತಿದ್ದೀರಿ. ಇಲ್ಲಿ ಎಲ್ಲಾ ಸದಸ್ಯರ ಭಾವನೆಗಳನ್ನು ಅರ್ಥಮಾಡಿಕೊಂಡು ತಾವೆಲ್ಲರೂ ಇದು ಬಹಳ ಮುಖ್ಯವಾದ ವಿಷಯ ನಾವೆಲ್ಲರೂ ಕೂಡ ಈ ಚರ್ಚೆಯಲ್ಲಿ ಭಾಗವಹಿಸಬೇಕೆಂದು ಆಯಿತು. ಮೂರು ದಿವಸವಾಗಿ ನಾಲ್ಕನೇ ದಿವಸಕ್ಕೆ ಮುಂದುವರೆಯಿತು. ಒಟ್ಟು ಮೂರು ದಿನವಸ ಮುಂದುವರೆಸಿದ್ದೀರಿ. ಈ 6 ದಿವಸಗಳಲ್ಲಿ 4 ದಿವಸ ಕೃಷಿ ಮತ್ತು ಗ್ರಾಮೀಣಾಭಿವೃದ್ಧಿಯ ಬಗ್ಗೆ ಚರ್ಚೆಯಾಯಿತು. ಅದು ಆದ ನಂತರ ಮತ್ತೊಂದು ಬಹಳ ಪ್ರಮುಖವಾದ ವಿಷಯದ ಬಗ್ಗೆ ನಾವು ಇವತ್ತು ಚರ್ಚೆ ಮಾಡುತ್ತಿದ್ದೇವೆ. ಬರ ಮತ್ತು ಅತಿವೃಷ್ಟಿಯ ಬಗ್ಗೆ ಚರ್ಚೆ ಮಾಡುವಂಥ ಸಮಯದಲ್ಲಿ ನಿನ್ನೆ ಅರ್ಧ ದಿವಸ ಕಲಾಪ ನಡೆದಿಲ್ಲ. ಮೂರು ಗಂಟೆಯ

ಮೇಲೆ ಈ ಚರ್ಚೆಯನ್ನು ತೆಗೆದುಕೊಂಡಿರುವಂಥದ್ದು. ಬರ ಮತ್ತು ಅತಿವೃಷ್ಟಿ ಬಹಳ ಮುಖ್ಯವಾಗಿ ಇವತ್ತು ಚರ್ಚೆಯಾಗಬೇಕಾಗಿದೆ, ಇದು ಗ್ರಾಮೀಣ ಮಟ್ಟದ ಜನರ ಜೀವನ್ಮರಣದ ಪ್ರಶ್ನೆಯಾಗಿರುವಂಥದ್ದು. Natural calamities, ಬರ ಅಥವಾ ಅತಿವೃಷ್ಟಿ ಇರಬಹುದು, ಈ ಎರಡನ್ನು ಕೂಡ ನಾವು ಸುಮ್ಮನೆ passing remarks ಮಾಡಿ, ಏನೋ ಬಂತು, ಚರ್ಚೆ ಮಾಡಿ ಮುಗಿಸೋಣ ಎನ್ನುವುದು ಬೇಡ. ಕೃಷಿ ಮತ್ತು ಗ್ರಾಮೀಣಾಭಿವೃದ್ಧಿಯ ಬಗ್ಗೆ ನಾನು ಮಾತನಾಡಬೇಕೆಂದು ಇದ್ದೆ. ಬಹುಶ: ನನಗೆ ತಿಳಿದ ಮಟ್ಟಿಗೆ ಈ ಅಧಿವೇಶನದಲ್ಲಿ ತಾವು Business Advisory Committee ಯಲ್ಲಿ ಬಹಳ ಶಿಸ್ತಾಗಿ ತೆಗೆದುಕೊಂಡಿರುವಂಥದ್ದು, ಯಾವ ಪಕ್ಷದ ಸ್ಟ್ರೆಂಥ್ ಎಷ್ಟು ಇದೆ, ಅದಕ್ಕೆ ತಕ್ಕಂತೆ ಮಾತನಾಡುವುದಕ್ಕೆ ಇಷ್ಟಿಷ್ಟು ಸಮಯ ಅವಕಾಶವನ್ನು ಕೊಡಬೇಕು, ಹೆಚ್ಚು ಸಮಯ ಕೊಡುವುದಕ್ಕೆ ಆಗುವುದಿಲ್ಲವೆಂದು ಹೇಳಿದಿರಿ, ಅದಕ್ಕಾಗಿ ಅದರಲ್ಲಿ ನಾನು ಮಾತನಾಡಲಿಲ್ಲ. ಈಗ ಬರ ಮತ್ತು ಅತಿವೃಷ್ಟಿಯ ವಿಷಯದಲ್ಲಿ ನಾನು ಮಾತನಾಡಬೇಕೆಂದು ಹೇಳಿದಾಗ, ನಾನು ನಿನ್ನೆ ಪ್ರಯತ್ನ ಮಾಡಿದೆ ಆಗಲಿಲ್ಲ. ಇವತ್ತು ಆ ವಿಷಯ ಮುಂದುವರೆಯುತ್ತದೆ ಸ್ವಲ್ಪ ಅದರ ಬಗ್ಗೆ ಇನ್ನು ಹೆಚ್ಚು ಚರ್ಚೆ ಬೇಕಾದರೆ ಇನ್ನು ಒಂದು ದಿವಸ ಮುಂದುವರೆಸಿ. ನಿಮ್ಮ ಹಗರಣಗಳು ಬೇರೆ ವಿಷಯಗಳು, ಏನೇನು ಕೆಸರಾಟ ಮಾಡುತ್ತೀರೆನ್ನುವುದು ನಮಗೆ ಗೊತ್ತಿದೆ. ಹಗರಣಗಳು ಬಂದಾಗ ನಾನು ಮಾತನಾಡುವುದಕ್ಕೆ ಇಷ್ಟಪಡುವುದಿಲ್ಲ. ಯಾವ ಸರ್ಕಾರ, ಯಾವ ಆಡಳಿತದಲ್ಲಿ scam free ಇರತಕ್ಕಂಥ ಹಗರಣಗಳೂ ನಡೆದಿದೆ? ಇದು ಒಬ್ಬರಿಗೊಬ್ಬರಿಗೆ, ನಮ್ಮ ವೈಯಕ್ತಿಕವಾದಂಥ ದ್ವೇಷ ಅಸೂಯೆಗಳಿಗೆ, ಇವತ್ತು ರಾಜಕೀಯದ ಲಾಭ-ನಷ್ಟ ಆಗತಕ್ಕಂಥದ್ದನ್ನು ನೀವು ಆಮೇಲೆ ಮಾತನಾಡಿಕೊಳ್ಳಿ, ಬೇಡವೆಂದು ಹೇಳುವುದಿಲ್ಲ. ಆದರೆ ಇಲ್ಲಿರತಕ್ಕಂಥದ್ದು ಬರ ಮತ್ತು ಅತಿವೃಷ್ಟಿ. ಅದರ ಹಿನ್ನೆಲೆಯಲ್ಲಿ ಬೇರೆ ಇನ್ನಿತರ ವಿಷಯಗಳನ್ನು ನಾನು ಪ್ರಸ್ತಾಪ ಮಾಡಬೇಕೆಂದು ಇದ್ದೇನೆ. ಏಕೆಂದರೆ, ಮಾನ್ಯ ಮುಖ್ಯಮಂತ್ರಿಗಳು ಹೇಳಿದ ಹಾಗೆ, ಆಯವ್ಯಯದಲ್ಲಿ ಮಂಡಿಸಿದ ಸಂದರ್ಭದಲ್ಲಿ ಅವರ ವಿಶೇಷ ಯೋಜನೆಗಳು ಇರಬಹುದು. ಮುಖ್ಯವಾಗಿ ಆಯವ್ಯಯದಲ್ಲಿ ಡಿಮಾಂಡ್ಸ್ ಬಗ್ಗೆ, ವಿಶೇಷ ಯೋಜನೆಗಳ ಬಗ್ಗೆ ಇವತ್ತು ಚರ್ಚೆ ಆಗಬೇಕಾಗಿರುವಂಥದ್ದು, ಕಳೆದ ಅಧಿವೇಶನದಲ್ಲಿ ಅದು ಆಗಲಿಲ್ಲ. ಬಹುಶ: ಅದಕ್ಕೋಸ್ಕರ ಇದಕ್ಕೆ ಹೆಚ್ಚು ಒತ್ತು ಕೊಟ್ಟು ಇವತ್ತು ವಿಶೇಷವಾದ ಅಧಿವೇಶನವನ್ನು ನೀವು ಕರೆದಿರುವಂಥ ಸನ್ನಿವೇಶದಲ್ಲಿ, ಇವತ್ತು ನೀವು ಹಗರಣಗಳ ಬಗ್ಗೆ ಮಾತನಾಡೋಣ. ಬರದ ಬಗ್ಗೆ ಚರ್ಚೆ ಮಾಡುವಾಗ ಬೇಗ ಮುಗಿಸಿ ಎಂದು ಹೇಳುವುದು ಅಲ್ಲ. ಇದರ

ಬಗ್ಗೆ ನಾನು ಸಹ ಮಾತನಾಡಬೇಕಾಗಿದೆ. ಏಕೆಂದರೆ, ಈಗ ಬಂಡವಾಳ ಹೂಡಿಕೆದಾರರು, ನೀವು ಚೈನಾ ದೇಶಕ್ಕೆ ಹೋಗಿದ್ದೀರಿ, ವಿಶೇಷವಾದ ಭೇಟಿ ಏನು? ಸರ್ಕಾರದ ಬೊಕ್ಕಸದಿಂದ ಮಾನ್ಯ ಶಾಸಕರುಗಳು ವಿದೇಶಿ ಪ್ರವಾಸಕ್ಕೆ ಹೋದರು, ಯಾವುದೇ ಸಮಿತಿ ಇರಬಹುದು, ಅದಕ್ಕೆ ಒಂದು ಉದ್ದೇಶ ಇರುವಂಥದ್ದು, ಮೋಜು ಮಾಡುವಂಥದ್ದು ಅಲ್ಲ. ಇವತ್ತೇ ಜನ ನಮ್ಮ ಬಗ್ಗೆ ಮೂಗು ಮುರಿಯುವಂಥದ್ದು ಮತ್ತು ಅಸಹ್ಯ ಪಡುವಂಥದ್ದು ಇದೆ. ಯಾವುದೇ ಶಾಸನ ಸಭೆಗಳ ಬಗ್ಗೆ ಗೌರವ ಇದೆಯೇನು? ಇವತ್ತು ನಾವು economy measures ಇಟ್ಟುಕೊಂಡು ಹೋಗಿದ್ದೆವು. ನೀವು ಈ ಸರ್ಕಾರ ಬಂದ ಮೇಲೆ ಒಂದು ತೀರ್ಮಾನವನ್ನು ಮಾಡಿದ್ದೀರಿ. 5 ವರ್ಷದೊಳಗಡೆ ಪ್ರತಿಯೊಬ್ಬ ಶಾಸಕನಿಗೂ ಕೂಡ ವಿದೇಶಕ್ಕೆ ಹೋಗತಕ್ಕಂಥ ಅವನಿಗೆ ಹೆಚ್ಚಿನ ಅನುಭವ ಬರತಕ್ಕಂಥ ಬೇರೆ ಬೇರೆ ದೇಶಗಳಿಗೆ ಹೋಗಿ ಬೇರೆ ಬೇರೆ ವಿಷಯಗಳನ್ನು ಗ್ರಹಿಸಿ ಅವನು ಬರತಕ್ಕಂಥ ಅವಕಾಶವನ್ನು ಕೊಡುತ್ತೇವೆನ್ನುವುದನ್ನು ಮಾಡಿದ್ದೀರಿ ಅದನ್ನು ಮಾಡಿ. ಇವತ್ತು ನೀವು ವಿಶೇಷವಾಗಿ ಚೈನಾ ದೇಶಕ್ಕೆ ಹೋದ ಸಂದರ್ಭದಲ್ಲಿ ಏನು ಬೆಳಕನ್ನು ಚೆಲ್ಲಿದ್ದೀರಿ, ಇವತ್ತು ಬಂಡವಾಳ ಹೂಡಿಕೆದಾರರ ಬಗ್ಗೆ ಮಾತನಾಡುತ್ತಿದ್ದೀರಿ, ಚೈನಾ ದೇಶದಿಂದ ನಿಮಗೆ ಏನು ಬಂಡವಾಳ ಬರುತ್ತದೆ? ನಾನು ಮಾತನಾಡಬೇಕೆಂದು ಇದ್ದೆ, ನಮ್ಮಲ್ಲಿರತಕ್ಕಂಥ red tapism ಗೂ ಕೂಡ ಚೈನಾ ದೇಶದಲ್ಲಿ ಅವರು red carpet ಹಾಕಿ ತೆಗೆದುಕೊಂಡು ಹೋಗತಕ್ಕಂಥದ್ದು, ಅವರಿಗೂ ನಮಗೂ ಬಹಳ ವ್ಯತ್ಯಾಸ ಇರತಕ್ಕಂಥದ್ದು. ಇವತ್ತು globalization ಹಿನ್ನೆಲೆಯಲ್ಲಿ ಇದನ್ನು ಹೇಳುತ್ತಿದ್ದೇನೆ. ನಿಮಗೆ ಚೈನಾ ದೇಶದ ಪ್ರವಾಸದಿಂದ ಏನು ಲಾಭವಾಗಿದೆ. ಅದರ ಬಗ್ಗೆ ನಾನು ಸ್ವಲ್ಪ ಮಾತನಾಡಬೇಕಾಗಿದೆ. ನನಗೆ ನೀವು ಸ್ವಲ್ಪ ಅವಕಾಶವನ್ನು ಕೊಡಬೇಕು. ಏಕೆಂದರೆ ಕೂಡ ನಾನು ಕೂಡ ಅನುಭವ ಇರತಕ್ಕಂಥವನು. ನಾನು ಈ ಸದನದಲ್ಲಿ ಮಾತನಾಡಬೇಕೆನ್ನುವ ರೀತಿಯಲ್ಲಿ ನಾನು ಇಷ್ಟಪಟ್ಟಿರತಕ್ಕಂಥವನು. ಮಾನ್ಯ ಸದಸ್ಯರುಗಳು ಸ್ಪಷ್ಟೀಕರಣ ಸಾಕಷ್ಟು ಕೇಳಿದ್ದಾರೆ. ನಾನು ಒಂದು ಸ್ಪಷ್ಟೀಕರಣ ಕೇಳಬೇಕೆಂದು ಇದ್ದೇನೆ, ನಾನು ಪ್ರಾರಂಭ ಮಾಡುತ್ತೇನೆ. ದಯಮಾಡಿ ನನಗೆ ಅವಕಾಶವನ್ನು ಕೊಡಬೇಕೆಂದು ನಾನು ತಮ್ಮಲ್ಲಿ ಮನವಿಯನ್ನು ಮಾಡುತ್ತೇನೆ.

ಅಧ್ಯಕ್ಷರು : ಮಾನ್ಯ ಶಿವಲಿಂಗೇಗೌಡರೆ, ಮಾನ್ಯ ಮುಖ್ಯಮಂತ್ರಿಗಳು ಏನೋ ಹೇಳುತ್ತಿದ್ದಾರೆ. ನೀವು ಅವರು ಮಾತನಾಡಿದ ನಂತರ ಹೇಳಿ. ಅವರು ಏನು ಹೇಳುತ್ತಾರೆ ಕೇಳೋಣ. ಅವರು ಮಾತನಾಡಿದ ನಂತರ ನೀವು ಮಾತನಾಡಿ.

ಶ್ರೀ ಹೆಚ್. ಸಿ. ಬಾಲಕೃಷ್ಣ : ಮಾನ್ಯ ಶ್ರೀನಿವಾಸ ಪ್ರಸಾದ್‌ರವರು ಮಾತನಾಡತಕ್ಕಂಥ ಸಂದರ್ಭದಲ್ಲಿ, ಹಗರಣದಲ್ಲಿ, ಹಗರಣಗಳ ಬಗ್ಗೆ ಮಾತನಾಡಿದರು. ಇದರ ಬಗ್ಗೆ ತಪ್ಪು ಸಂದೇಶ ಹೋಗಬಾರದು.

(ಗೊಂದಲ)

ಅಧ್ಯಕ್ಷರು : ಮಾನ್ಯ ಮುಖ್ಯಮಂತ್ರಿಗಳು ಮಾತನಾಡಿದ ನಂತರ ನೀವು ಏನು ಹೇಳಬೇಕು ಹೇಳಿ, ಮಾತನಾಡುವುದಕ್ಕೆ ನಿಮಗೆ ಯಾರು ಬೇಡವೆನ್ನುತ್ತಾರೆ[2].

(ಗೊಂದಲ)

ಶ್ರೀ ಬಿ. ಎಸ್. ಯಡಿಯೂರಪ್ಪ : ಮಾನ್ಯ ಶ್ರೀನಿವಾಸ ಪ್ರಸಾದರವರು ಅನುಭವಿ ಇರತಕ್ಕಂಥವರು.

ಅಧ್ಯಕ್ಷರು : ನೀವು ಏಕೆ ಪರಸ್ಪರ ಮಾತನಾಡುತ್ತೀರಿ. ಇದು ಒಳ್ಳೆಯದು ಅಲ್ಲ. ನೀವು ಪರ್ಮಿಷನ್ ತೆಗೆದುಕೊಂಡು ಮಾತನಾಡಿ. ಪರಸ್ಪರ ಮಾತನಾಡಿದರೆ ಈ ಸದನಕ್ಕೆ ಗೌರವ ಬರುವುದಿಲ್ಲ. ಮಾನ್ಯ ರೇವಣ್ಣನವರೆ ಕುಳಿತುಕೊಳ್ಳಿ.

(ಗೊಂದಲ)

ಮಾನ್ಯ ಕಟ್ಟಾಸುಬ್ರಮಣ್ಯ ನಾಯ್ಡುರವರೆ ತಾವು ಸುಮ್ಮನೆ ಕುಳಿತುಕೊಂಡು ಬಿಡಿ. ಆ ರೀತಿ ಏನಾದರೂ ಮಾತನಾಡಿದ್ದು ಇದ್ದರೆ ಕಡತದಿಂದ ತೆಗೆಯೋಣ ಬಿಡಿ.

(ಗೊಂದಲ)

ಶ್ರೀ ಮಾಲೀಕಯ್ಯ ಗುತ್ತೇದಾರ : ಈ ರೀತಿಯಾದರೆ ಸದನವನ್ನು ನಡೆಸುವುದಕ್ಕಾಗುವುದಿಲ್ಲ.

ಅಧ್ಯಕ್ಷರು : ಪ್ಲೀಸ್ ಗುತ್ತೇದಾರವರೆ ಕುಳಿತುಕೊಳ್ಳಿ. ಮಾನ್ಯ ಬಾಲಕೃಷ್ಣ ಪ್ಲೀಸ್.

ಶ್ರೀ ಹೆಚ್. ಸಿ. ಬಾಲಕೃಷ್ಣ : ಎಲ್ಲರದ್ದು ಎಲ್ಲಾ ಗೊತ್ತಿದೆ ಎಂದು ಮಾನ್ಯ ಮಂತ್ರಿಗಳು ಹೇಳುತ್ತಿದ್ದಾರೆ, ದಯವಿಟ್ಟು ಅವರಿಗೆ ಏನು ಗೊತ್ತಿದೆ ಎನ್ನುವುದನ್ನು ಹೇಳಬೇಕು.

ಶ್ರೀ ಬಿ.ಎಸ್. ಯಡಿಯೂರಪ್ಪ : ಮಾನ್ಯ ಬಾಲಕೃಷ್ಣರವರೆ ನಾನು ಮಾತನಾಡಲು ಎದ್ದು ನಿಂತಿದ್ದೇನೆ. ಮಾನ್ಯ ಶ್ರೀನಿವಾಸ ಪ್ರಸಾದರವರು ಅನುಭವಿ ಸಂಸದೀಯ ಪಟುಗಳು. ಅವರು ಹೆಚ್ಚು ಮಾತನಾಡಬೇಕು, ಹೆಚ್ಚು ಮಾರ್ಗದರ್ಶನ ಮಾಡಬೇಕು. ಇಲ್ಲಿರುವ ಅನೇಕ ಹೊಸ ಸದಸ್ಯರು ಅವರಿಂದ ಕಲಿಯುವಂಥದ್ದು ಬಹಳ ಇದೆ. Global investors ವಿಷಯದಲ್ಲಿ ಜಗತ್ತಿನ ಬೇರೆ ಬೇರೆ ಭಾಗದಿಂದ ಹೂಡಿಕೆದಾರರನ್ನು invite ಮಾಡುವ ವಿಷಯದಲ್ಲಿ

ಪ್ರತಿ ಪಕ್ಷದ ನಾಯಕರು, ಮಾನ್ಯ ಶ್ರೀನಿವಾಸ ಪ್ರಸಾದರವರನ್ನು ಸೇರಿದಂತೆ ನಾನು ಪ್ರಮುಖರ ಒಂದು ಸಭೆಯನ್ನು ಕರೆಯುತ್ತೇನೆ. ಹೇಗೆ ಮಾಡಬೇಕು, ಹೇಗೆ ಆಕರ್ಷಣೆ ಮಾಡಬೇಕು, ಯಾರನ್ನು ಕರೆಯಬೇಕು ಇದರ ಬಗ್ಗೆಯೂ ನಿಮ್ಮ ಸಲಹೆಯನ್ನು ತೆಗೆದುಕೊಳ್ಳುತ್ತೇನೆ. ಚೈನಾ ದೇಶಕ್ಕೆ ನಾನು request ಮಾಡಿ ಹೋಗಿರಲಿಲ್ಲ. ಪ್ರತಿವರ್ಷ ಕೇಂದ್ರ ಸರ್ಕಾರ ಕೆಲವು ರಾಜ್ಯದ ಮುಖ್ಯಮಂತ್ರಿಗಳನ್ನು ಕಳುಹಿಸುತ್ತಾರೆ. ಅದರಂತೆ ನನಗೆ ಹೋಗಬೇಕೆಂದು ಆಮಂತ್ರಣ ಬಂದಿತ್ತು ನಾನು ಹೋಗಿದ್ದೆ. ನಾನು ಚೈನಾ ದೇಶಕ್ಕೆ ಹೋದಾಗ ಸುಮಾರು 65 ರಿಂದ 70 ಜನ ಕೈಗಾರಿಕೋದ್ಯಮಿಗಳು ಯಾರು ದೇಶದ ಜಗತ್ತಿನ ಬೇರೆ ಬೇರೆ ಭಾಗದಲ್ಲಿ ಕೈಗಾರಿಕೆಗಳನ್ನು ಮಾಡುವುದಕ್ಕೆ invest ಮಾಡಿದ್ದಾರೆ ಅಂತಹವರ ಜೊತೆಯಲ್ಲಿ ಗಂಭೀರವಾದಂತಹ ಚರ್ಚೆಗಳು ಆಗಿವೆ. ಅವರಿಗೆ ದೆಹಲಿ ಮತ್ತು ಬೆಂಗಳೂರು ಎರಡೇ ಗೊತ್ತಿರುವುದು. ಆ ತರಹದ ಜನರು ಯಾರು ಎಂದು ಆ ಬಗ್ಗೆ ವಿವರಕ್ಕೆ ಹೋಗದೆಯೇ Global Investors' Meetಗೆ ಅವರು ಬರುವುದಕ್ಕೆ ಒಪ್ಪಿಕೊಂಡಿದ್ದಾರೆ ಅವರು invest ಮಾಡುವುದಕ್ಕೂ ಸಹ ರೆಡಿ ಇದ್ದಾರೆ. ಈಗಾಗಲೇ invest ಮಾಡಿರುವಂತಹವರು ಇತರರನ್ನು ಜೊತೆಯಲ್ಲಿ ಕರೆದುಕೊಂಡು ಬರುತ್ತೇವೆಂದು ಹೇಳಿದ್ದಾರೆ. ಯಾರ್‍ಯಾರು ಬಂದಿದಾರೆಂಬ ಬಗ್ಗೆ ಸುದೀರ್ಘವಾಗಿ ನಾನು ಮಾತನಾಡುತ್ತೇನೆ. ಆದರೆ ಚೈನಾ ದೇಶಕ್ಕೆ ಅವರಿಗೆ ಏನೋ ಕೊರತೆಯಾಗಿದೆ ಅವರು ಬಂದು invest ಮಾಡುತ್ತಾರೆಂದು ನಾನು ಸಹ ಅಂದುಕೊಂಡಿರುವುದಿಲ್ಲ, ನಾನು ಅದರ ಭ್ರಮೆಯಲ್ಲಿಲ್ಲ. ಅಲ್ಲಿ invest ಮಾಡಿ ಕೆಲಸದಲ್ಲಿರುವಂತಹವರು ಭಾರತದ ಬಗ್ಗೆ ದೆಹಲಿಯ ಬಗ್ಗೆ, ಬೆಂಗಳೂರಿನ ಬಗ್ಗೆ ಆಸಕ್ತಿ ಇರುವಂತಹವರು ದೊಡ್ಡದೊಡ್ಡ ಕಂಪನಿಯವರು ಆ ಮೀಟಿಂಗ್‌ಗೆ ಬಂದಿದ್ದರು. ಅವರು ನಾವು ಬರುತ್ತೇವೆಂದು ಹೇಳಿದ್ದಾರೆ. ಅವರು ಬಂದರೆ ಲಾಭವಾಗುತ್ತದೆ ಎಂದು ನಾನು ಅಂದುಕೊಂಡಿದ್ದೇನೆ. ಲಾಭ ಆಗುತ್ತದೆಯೋ ಅಥವಾ ಬಿಡುತ್ತದೆಯೋ ನನಗೆ ಗೊತ್ತಿಲ್ಲ. ಇದರಲ್ಲಿ ನನ್ನ ಪ್ರಯತ್ನವಷ್ಟೇ. ನೀವು ಹೇಳಿರುವುದಕ್ಕೆ ವಿವರವಾದಂತಹ ಮಾಹಿತಿಯನ್ನು ಹೇಳೋಣ. ಈಗ ಚರ್ಚೆಯನ್ನು ಮಾಡುವುದಕ್ಕೆ ಪ್ರಾರಂಭ ಮಾಡೋಣ.

ಶ್ರೀ ಸಿದ್ದರಾಮಯ್ಯ: (ಮಾನ್ಯ ವಿರೋಧಪಕ್ಷದ ನಾಯಕರು): ಮಾನ್ಯ ಅಧ್ಯಕ್ಷರೆ, ಮಾನ್ಯ ಶ್ರೀನಿವಾಸಪ್ರಸಾದ್‌ರವರು ಏನು ಪ್ರಸ್ತಾಪ ಮಾಡಿದ್ದಾರೆ. ಇಲ್ಲಿ ನಮ್ಮ ಅಜೇಂಡಾದಲ್ಲಿ ನೋಡಿದ್ದೇನೆ. ನಿನ್ನೆ ದಿನ ನಿಯಮ 60 ಇರುವುದನ್ನು ನಿಯಮ 69ಗೆ Convert ಮಾಡಿದ್ದೀರಿ. ಬರಗಾಲದ ಬಗ್ಗೆ 9ನೇ ತಾರೀಖಿಗೆ ಇಲ್ಲಿ ನಾವು

ರೂಲ್ 60ರಲ್ಲಿ ಪ್ರಸ್ತಾಪ ತೆಗೆದುಕೊಂಡು ಬಂದಿದ್ದೇವೆ. ಅದು ಗ್ರಾಮೀಣಾಭಿವೃದ್ಧಿ ಮತ್ತು ಕೃಷಿ ಬಗ್ಗೆ ಚರ್ಚೆ ಮಾಡಬೇಕೆಂದು ಸರ್ಕಾರವು ಇಚ್ಛೆಪಟ್ಟಿರುವುದರಿಂದ ಮತ್ತೆ ಈ ರಾಜ್ಯದ ಜನರು ಕೂಡ ನಮ್ಮ ಮೇಲೆ ತಪ್ಪನ್ನು ತಿಳಿದುಕೊಳ್ಳಬಾರದು ಎನ್ನುವ ಕಾರಣಕೊಸ್ಕರವಾಗಿ ಬರಗಾಲವು ಬಹಳ ಪ್ರಾಮುಖ್ಯವಾಗಿದೆ ಎಂದು 3 ದಿನಗಳ ಕಾಲ ನಾನು ಚರ್ಚೆಯನ್ನು ಮಾಡಿದ್ದೇವೆ ಅದರಲ್ಲಿ ನಾವು ಕೂಡ ಭಾಗವಹಿಸಿದ್ದೇವೆ. ನಮ್ಮ ಸಲಹೆ ಮತ್ತು ಅಭಿಪ್ರಾಯಗಳನ್ನು ಕೃಷಿ ಮತ್ತು ಗ್ರಾಮೀಣಾಭಿವೃದ್ಧಿಯ ಬಗ್ಗೆ ಕೊಟ್ಟಿದ್ದೇವೆ. ಈಗ ನಿನ್ನೆ ದಿನ ಬರದ ಮೇಲೆ ಚರ್ಚೆಯು ಪ್ರಾರಂಭವಾಗಿದೆ. ನಿನ್ನೆಯ ದಿನ ಮಾನ್ಯ ಸದಸ್ಯರಾದ ಶ್ರೀ ರೇವಣ್ಣನವರು ನಿಲುವಳಿ ಸೂಚನೆಯ ಬಗ್ಗೆ ಎತ್ತಿದ್ದಾರೆ. ರೂಲ್ 60ರಲ್ಲಿ ಕೊಟ್ಟಿರುವುದನ್ನು ತಾವು ರೂಲ್ 69ಗೆ convert ಮಾಡಿದ್ದೀರಿ. ಇವತ್ತು ಮಾನ್ಯ ಜಯಚಂದ್ರರವರು ಪ್ರಸ್ತಾಪ ಮಾಡಿದ್ದಾರೆ, ನಾವು ಅದನ್ನು ಮೊನ್ನೆಯ ದಿನ ಕೊಟ್ಟಿದ್ದೇವು. ಅದನ್ನು ಕೂಡ ತಾವು convert ಮಾಡಿದ್ದೀರಿ. ನಮಗೆ ಇದರ ಬಗ್ಗೆ ಚರ್ಚೆ ಮಾಡುವುದು ಬೇಡವೆಂದು ಹೇಳುವುದಿಲ್ಲ. ಅವು ಕೂಡ ಚರ್ಚೆಯಾಗಬೇಕು. ಆದರೆ ಮೊದಲು ಬರಗಾಲದ ಬಗ್ಗೆ ಚರ್ಚೆಯಾಗಬೇಕು. ಈಗ ಬರಗಾಲದ ಬಗ್ಗೆ ರೂಲ್ 69ರಲ್ಲಿ ಚರ್ಚೆಯು ಪ್ರಾರಂಭವಾಗಿಬಿಟ್ಟಿದೆ. ಅದನ್ನು ರೂಲ್ 69ಗೆ convert ಮಾಡಿ ಅದು 9ನೇ ತಾರೀಖು ಆಗಿದೆ. ಚರ್ಚೆಯು ನಿನ್ನೆಯ ದಿನ ಪ್ರಾರಂಭವಾಗಿದೆ. ನಾನು ನಿನ್ನೆಯ ದಿನ ಸದನದಲ್ಲಿರಲಿಲ್ಲ. ಈಗ ಅದು ಮುಂದುವರಿಯಲಿ ಎಂದು ಕೆಲವು ಜನ ಸ್ನೇಹಿತರು ಆ ಕಡೆಯವರು ಭಾಗವಹಿಸಿದ್ದಾರೆ ಈ ಕಡೆಯವರು ಸಹ ಭಾಗವಹಿಸಿದ್ದಾರೆ. ಮಾನ್ಯ ಸದಸ್ಯರಾದ ಶ್ರೀ ಶ್ರೀನಿವಾಸ್ ಪ್ರಸಾದ್‌ರವರು ಮಾತನಾಡಲಿ, ನಾನು ಕೂಡ ಬರಗಾಲದ ಬಗ್ಗೆ ಮಾತನಾಡಬೇಕಾಗಿದೆ. ಬರಗಾಲದ ಬಗ್ಗೆ ನಮಗೆ ಸರ್ಕಾರದಿಂದ ಉತ್ತರ ಬೇಕಾಗುತ್ತದೆ. ರೈತರು ಇವತ್ತು ಬಹಳ ಜನರು ತೊಂದರೆಯಲ್ಲಿದ್ದಾರೆ. ಇವತ್ತು ಬರಗಾಲವು ಬಹಳ ಭೀಕರವಾಗಿದೆ. ಮುಂಗಾರು ಮಳೆಯು ಕೈಕೊಟ್ಟಿದೆ. ಬೆಳೆಯನ್ನು ಹಾಕಿರುವುದೆಲ್ಲವನ್ನು ಅವರುಗಳು ಕಳೆದುಕೊಂಡಿದ್ದಾರೆ. ಮನೆಯಲ್ಲಿದ್ದಂತಹ ಬೀಜ ಮತ್ತು ಗೊಬ್ಬರವನ್ನು ಸಹ ಕಳೆದುಕೊಂಡಿದ್ದಾರೆ. ಆ ಕಾರಣದಿಂದ ಸರ್ಕಾರವು ಏನು ಮಾಡುತ್ತಿದೆ ಎನ್ನುವುದರ ಬಗ್ಗೆ ಜನರಿಗೆ ಗೊತ್ತಾಗಬೇಕಾಗಿದೆ, ರೈತರಿಗೆ ನಾವು ವಿಶ್ವಾಸವನ್ನು ಮೂಡಿಸಬೇಕಾಗುತ್ತದೆ. ಆ ಕಾರಣದಿಂದ ಬರಗಾಲದ ಬಗ್ಗೆ ಮೊದಲು ಮಾತನಾಡುವುದಕ್ಕೆ ಶ್ರೀನಿವಾಸಪ್ರಸಾದ್‌ರವರು ಮಾತನಾಡುವುದಕ್ಕೆ ತಾವು ಅವಕಾಶವನ್ನು ಮಾಡಿಕೊಡಬೇಕು. ಅಮೇಲೆ ಬೇರೆಯವರು ಯಾರಾದರೂ ಮಾತನಾಡಲಿ, ನಂತರ ನಾನು ಮಾತನಾಡುತ್ತೇನೆ.

ಶ್ರೀ **ಹೆಚ್.ಸಿ. ಬಾಲಕೃಷ್ಣ:** ಮಾನ್ಯ ಸದಸ್ಯರಾದಂತಹ ಶ್ರೀನಿವಾಸಪ್ರಸಾದ್‌ರವರು ಮಾತನಾಡುವಂತಹ ಸಂದರ್ಭದಲ್ಲಿ ಒಂದು ಮಾತನ್ನು ಹೇಳಿದರು. ಹಗರಣಗಳ ಬಗ್ಗೆ ಒಬ್ಬರಿಗೊಬ್ಬರು.... ಅವರು ಏನು ಹೇಳಿದ್ದಾರೆ ಅದನ್ನು ನಾವು ಹೇಳಬೇಕಾಗುತ್ತದೆ. ಈಗ ಹಗರಣಗಳ ಬಗ್ಗೆ ಚರ್ಚೆಯನ್ನು ಮಾಡುವುದನ್ನು ಬಿಟ್ಟು ಅದನ್ನು ಬಿಟ್ಟು ಬೇರೆ ವಿಚಾರವನ್ನು ಚರ್ಚೆಗೆ ಕೊಡಿ ಅದು ಎಲ್ಲಾ ಸರ್ಕಾರಗಳಲ್ಲೂ ನಡೆದುಕೊಂಡು ಬಂದಿದೆ ಎಂಬ ಮಾತನ್ನು ಹೇಳಿದ್ದರು. ಹಿರಿಯ ಸದಸ್ಯರಾದ ಶ್ರೀನಿವಾಸ ಪ್ರಸಾದ್‌ರವರಿಗೆ ಒಂದು ಮಾತನ್ನು ಹೇಳುತ್ತೇನೆ. ಎಲ್ಲೋ ಒಂದು ಕಡೆಯಲ್ಲಿ ಈ ಸರ್ಕಾರದ ಹಣವನ್ನು ಸರಿಯಾದ ರೀತಿಯಲ್ಲಿ ಬಳಸಲಿಲ್ಲವೆನ್ನುವುದನ್ನು ಕೂಡ ನಾವು ಜನಸಾಮಾನ್ಯರಿಗೆ ತಿಳಿಸಬೇಕಾಗುತ್ತದೆಯ್ಲಲವೇ?

ಶ್ರೀ **ವಿ. ಶ್ರೀನಿವಾಸ ಪ್ರಸಾದ್**: ಮಾಡಪ್ಪಾ, ಬೇಡ ಅಂದವರು ಯಾರು?

ಶ್ರೀ **ಹೆಚ್. ಸಿ. ಬಾಲಕೃಷ್ಣ** : ಆಮೇಲೆ ಚರ್ಚೆಮಾಡುವುದಕ್ಕೆ ಅವಕಾಶವನ್ನು ಕೊಡಲಿ, ಬರಗಾಲದ ಬಗ್ಗೆ ಮೊದಲು ಚರ್ಚೆಯಾಗಲಿ, ಅದಕ್ಕೆ ಏನು ಉತ್ತರವನ್ನು ಕೊಡುತ್ತಾರೋ ಕೊಡಲಿ, ಅದು ಆದಮೇಲೆಯೂ ಕೂಡ ಹಗರಣಗಳ ಬಗ್ಗೆ ಚರ್ಚೆಯನ್ನು ಮಾಡುವುದಕ್ಕೆ ಅವಕಾಶವನ್ನು ಕೊಡಬೇಕಲ್ಲಾ? ಅದರ ಬಗ್ಗೆ ತಪ್ಪಾಗಿ ಅರ್ಥೈಸುವುದು ಬೇಡವೆಂದು ನಾನು ಹೇಳುತ್ತೇನೆ.

ಶ್ರೀ **ಸಿದ್ದರಾಮಯ್ಯ**: ಮೊದಲು ಬರಗಾಲದ ಬಗ್ಗೆ ಚರ್ಚೆಯು ಮುಗಿಯಲಿ.

ಶ್ರೀ **ಹೆಚ್. ಸಿ. ಬಾಲಕೃಷ್ಣ** : ಅದನ್ನು ನಾವು ಒಪ್ಪಿಕೊಳ್ಳುತ್ತೇನೆ.

(ಗೊಂದಲ)

ಒಬ್ಬ ಮಾನ್ಯ ಸದಸ್ಯರು : ಅದನ್ನು ಮಾಡೋಣ ಇದನ್ನು ಮಾಡೋಣ.

ಶ್ರೀ **ಹೆಚ್. ಸಿ. ಬಾಲಕೃಷ್ಣ** : ಅದನ್ನು ಮಾಡುವುದಕ್ಕೆಯೇ ನಾವು ಇಲ್ಲಿಗೆ ಬಂದಿರುವುದು.

ಶ್ರೀ **ಬಸವರಾಜ ಬೊಮ್ಮಾಯಿ (ಜಲಸಂಪನ್ಮೂಲ ಸಚಿವರು)**: ಸನ್ಮಾನ್ಯ ಸಭಾಧ್ಯಕ್ಷರೆ, ನಿನ್ನೆಯ ದಿನ ಬರಗಾಲದ ಬಗ್ಗೆ ಚರ್ಚೆ ಮಾಡುವುದಕ್ಕೆ ತಾವು ಅವಕಾಶವನ್ನು ಕೊಟ್ಟಿದ್ದೀರಿ. ಎರಡು ಕಡೆಯಿಂದಲೂ ಬಹಳಷ್ಟು ಜನರು ಮಾತನಾಡಿದ್ದಾರೆ. ಆಗ ವಿರೋಧ ಪಕ್ಷದ ನಾಯಕರು ಸದನದಲ್ಲಿ ಇರಲಿಲ್ಲ. ಈಗ ಶ್ರೀನಿವಾಸ ಪ್ರಸಾದ್‌ರವರು ಮತ್ತು ವಿರೋಧಪಕ್ಷದ ನಾಯಕರು ಮಾತನಾಡುವುದಕ್ಕೆ ಅಭ್ಯಂತರವಿಲ್ಲ. ಇದಕ್ಕೆ ಉತ್ತರವನ್ನು ಕೊಡುವುದಷ್ಟೇ ಬಾಕಿ ಇದೆ. ಆದರೆ ಅದನ್ನು ಮಾಡಬಹುದು. ಈಗಾಗಲೇ ಬರದ ಬಗ್ಗೆ ಚರ್ಚೆಯಾಗಿದೆ, ಉತ್ತರವನ್ನು ಕೊಡುವುದು ಬಾಕಿ ಇದೆ. ಇದು ಪ್ರಮುಖವಾಗಿದೆ. ನಿನ್ನೆಯ ದಿನ ಮಾನ್ಯ ರೇವಣ್ಣನವರು ವಿಷಯ ಪ್ರಸ್ತಾಪ

ಮಾಡಿದಾಗ ಮುಖ್ಯಮಂತ್ರಿಗಳು ಸದನದಲ್ಲಿ ಇರಲಿಲ್ಲ. ಅವರು ಬಂದ ಮೇಲೆ ತಾವು ಚರ್ಚೆ ಮಾಡಿ ಎಂದು ಹೇಳಿದ್ದಾರೆ.

ಶ್ರೀ ಹೆಚ್. ಡಿ. ರೇವಣ್ಣ: ಮಾನ್ಯ ಅಧ್ಯಕ್ಷರೆ, . . .

ಅಧ್ಯಕ್ಷರು : ಅವರು ಏನು ಹೇಳುತ್ತಾರೆಂದು ತಾವು ಕೇಳಿ.

ಶ್ರೀ ಬಸವರಾಜ ಬೊಮ್ಮಾಯಿ : ಅದಕ್ಕಾಗಿ ಸದನಕ್ಕೆ ಬಂದ ಮುಖ್ಯಮಂತ್ರಿಗಳು ಕಲ್ಲಿದ್ದಲಿನ ಬಗ್ಗೆಯೇ ಮೊದಲು ಚರ್ಚೆಗೆ ತೆಗೆದುಕೊಳ್ಳಿ ಎಂದು ಹೇಳಿದ್ದಾರೆ. ಅದಕ್ಕೆ ತಾವು ಅನುಮತಿಯನ್ನು ಕೊಟ್ಟಿದ್ದೀರಿ. ಅದಕ್ಕಾಗಿ ಮಾನ್ಯ ರೇವಣ್ಣನವರು ಪ್ರಸ್ತಾಪ ಮಾಡಲಿ, ಅನಂತರ ಮಾನ್ಯ ಮುಖ್ಯಮಂತ್ರಿಗಳು ಉತ್ತರವನ್ನು ಕೊಡುತ್ತಾರೆ. ಆಮೇಲೆ ಬರಗಾಲದ ಬಗ್ಗೆ ಮಾತನಾಡಲಿ. ಏನು ತೊಂದರೆ ಇಲ್ಲ.

ಶ್ರೀ ಕೆ. ಎಂ. ಶಿವಲಿಂಗೇಗೌಡ : ಆಮೇಲೆ ಬರಗಾಲದ ಬಗ್ಗೆಯೂ ಮಾತನಾಡುವುದಕ್ಕೂ ಬರೋಣ.

ಶ್ರೀ ಸಿದ್ದರಾಮಯ್ಯ: ಹಗರಣಗಳ ಬಗ್ಗೆ ಚರ್ಚೆ ಮಾಡುವುದಕ್ಕೆ ಸರ್ಕಾರಕ್ಕೆ ಉತ್ತರ ಕೊಡುವುದಕ್ಕೆ ನಮ್ಮದು ಕೂಡ ಒಂದು ಇದೆ. ಅವರದು ಸಹ ಇದೆ.

ಶ್ರೀ ಬಸವರಾಜ ಬೊಮ್ಮಾಯಿ: ಎರಡನ್ನು ಮಾಡಲಿ.

ಶ್ರೀ ಸಿದ್ದರಾಮಯ್ಯ: ಬರಗಾಲದ ಬಗ್ಗೆ ಚರ್ಚೆಯು ಪ್ರಾರಂಭವಾಗಿ ಅದು ಮುಗಿದ ಮೇಲೆ ಆ ಬಗ್ಗೆ ಚರ್ಚೆಯನ್ನು ಮಾಡಲಿ. 69ಕ್ಕೆ ಮೊದಲೇ convert ಮಾಡಿದ್ದಾರೆ. ಮಾನ್ಯ ಮುಖ್ಯಮಂತ್ರಿಗಳೇ,. ನೀವು ಬರಗಾಲದ ಬಗ್ಗೆ ಚರ್ಚೆ ಮಾಡುವುದಿಲ್ಲವೆಂದರೆ ಸರ್ಕಾರಕ್ಕೆ ಆಸಕ್ತಿ ಇಲ್ಲವೆಂದು ಹೇಳಬೇಕಾಗುತ್ತದೆ. ಈಗಾಗಲೇ ಚರ್ಚೆಯೂ ಪ್ರಾರಂಭವಾಗಿದೆ.

ಶ್ರೀ ಬಿ. ಎಸ್. ಯಡಿಯೂರಪ್ಪ (ಮಾನ್ಯ ಮುಖ್ಯಮಂತ್ರಿಗಳು) : ನೀವು ಏನು ಹೇಳಿಲ್ಲ ಅಂದೆ. ಬೇಡವೆಂದು ಹೇಳುವುದಕ್ಕೆ ನಾನು ಯಾರು. ನನ್ನ ಸರ್ಕಾರದ ಮೇಲೆ ಆರೋಪ ಮಾಡುವುದು ಬೇಡವೆಂದು ಹೇಳುವುದಕ್ಕೆ ನಾನು ಯಾರು? ನಿಮಗೆ ಏನು ಅನಿಸುತ್ತದೆ ಅದನ್ನು ಹೇಳಿ ಅಂದೆ.

ಶ್ರೀ ಸಿದ್ದರಾಮಯ್ಯ : ಕಲ್ಲಿದ್ದಲಿನ ಬಗ್ಗೆ ಚರ್ಚೆಯನ್ನು ಮೊದಲು ತೆಗೆದುಕೊಳ್ಳಿ ಎಂದು ಏತಕ್ಕೆ ಹೇಳುತ್ತೀರಿ? ಬರಗಾಲದ ಬಗ್ಗೆ ಚರ್ಚೆಯು ಪ್ರಾರಂಭವಾಗಿದೆಯಲ್ಲಾ?

ಶ್ರೀ ಬಿ. ಎಸ್. ಯಡಿಯೂರಪ್ಪ: ನಾನು ಏತಕ್ಕೆಂದು ಹೇಳುತ್ತೇನೆ.

ಶ್ರೀ ಸಿದ್ದರಾಮಯ್ಯ: ಅಜೆಂಡಾವನ್ನು ಚೇಂಜ್ ಮಾಡುವುದಕ್ಕೆ ಅವರಿಗೆ ಅಧಿಕಾರವಿದೆ.

ಶ್ರೀ ಹೆಚ್. ಡಿ. ರೇವಣ್ಣ : ಮಾನ್ಯ ಅಧ್ಯಕ್ಷರೆ. . .

ಶ್ರೀ ಬಿ. ಎಸ್. ಯಡಿಯೂರಪ್ಪ: ಮಾನ್ಯ ರೇವಣ್ಣನವರೆ ಒಂದು ನಿಮಿಷ ತಾಳಿ. ನೀವು ಹೇಳುವುದು ಸರಿ ಇದೆ. ಬರಗಾಲದ ಬಗ್ಗೆ ಚರ್ಚೆ ಮಾಡುವುದು ಈ ಮನೆಯ ಸದಸ್ಯರಿಗೆ ಬೇರೆ ಎಲ್ಲಕ್ಕಿಂತ ಆದ್ಯತೆ ಇರುವಂತಹ ವಿಷಯ. ಅದಕ್ಕಾಗಿಯೇ ಕೃಷಿ ಮತ್ತು ಗ್ರಾಮೀಣಾಭಿವೃದ್ಧಿ ಬಗ್ಗೆಯೇ ಆದ್ಯತೆಯನ್ನು ಕೊಟ್ಟಿರುವುದು. ನಾನು ನಿಜಕ್ಕೂ ನಿಮಗೆ ಅಭಿನಂದನೆಯನ್ನು ಸಲ್ಲಿಸುತ್ತೇನೆ. ನಿನ್ನೆಯ ಮಧ್ಯಾಹ್ನದಿಂದಲೇ ಈ ಬಗ್ಗೆ ಚರ್ಚೆಯಾಗಬೇಕಾಗಿತ್ತು. ನೀವು ಅನಿವಾರ್ಯವಾಗಿ ಮೈಸೂರಿಗೆ ಬಂದಿದ್ದೀರಿ, ನಾನು ಕೂಡ ಅನಿವಾರ್ಯವಾಗಿ ಮೈಸೂರಿಗೆ ಬಂದಿದ್ದೇನೆ. ಆದರೂ ಕೂಡ ಸನ್ಮಾನ್ಯ ಅಧ್ಯಕ್ಷರು ಬರಗಾಲದ ಬಗ್ಗೆ ಚರ್ಚೆಯನ್ನು ಪ್ರಾರಂಭ ಮಾಡಿಸಿದ್ದಾರೆ. ಈಗ ಏನಾಗಿದೆ ಮಾನ್ಯ ವಿರೋಧಪಕ್ಷದ ನಾಯಕರಾದ ಸಿದ್ದರಾಮಣ್ಣನವರೆ, ಇಡೀ ರಾಜ್ಯದಲ್ಲಿ ಈ ಕೋಲ್ ಸಪ್ಲೈ ಖರೀದಿ ವಿಷಯದಲ್ಲಿ ಬಹಳಷ್ಟು ಗೊಂದಲದ ವಾತಾವರಣವು ಉಂಟಾಗಿ ಮಾಜಿ ಮುಖ್ಯಮಂತ್ರಿಗಳೊಬ್ಬರು ಮಾತನಾಡುತ್ತಾ ಮುಖ್ಯಮಂತ್ರಿಗಳಿಗೆ ಚಪ್ಪಲಿ ಹೊಡೆಯುವಂತಹ ಕಾಲ ಬಂದಿದೆ ಎಂದು ಹೇಳಿರುವುದು ಪತ್ರಿಕೆಯಲ್ಲಿ ಬಂದಿದೆ. ಆಮೇಲೆ ಅದನ್ನು ವಾಪಸ್ಸು ತೆಗೆದುಕೊಂಡಿದ್ದಾರೆ. ಹಾಗಾದರೆ ಏನು ಗಂಭೀರವಾದ ವಿಷಯ ಇರಬೇಕು? ಆ ಗಂಭೀರವಾದಂತಹ ವಿಷಯವನ್ನು ಜನತೆಯ ಮುಂದೆ ಮನವರಿಕೆಯನ್ನು ಮಾಡಿಕೊಡುವುದು ನನ್ನ ಕರ್ತವ್ಯವೆಂದು ನಾನು ತಿಳಿದುಕೊಂಡಿದ್ದೇನೆ. ಅದಕ್ಕಾಗಿ ಒಂದು ಗಂಟೆಯೊಳಗಾಗಿ ಇದನ್ನು ಮುಗಿಸೋಣ. ನಂತರ ಬರದ ಬಗ್ಗೆ ಚರ್ಚೆ ಮಾಡುವುದಕ್ಕೆ ದಯಮಡಿ ಸನ್ಮಾನ್ಯ ಅಧ್ಯಕ್ಷರೆ ಅವಕಾಶವನ್ನು ಮಾಡಿಕೊಡಿ. ಇದಕ್ಕೆ ನನ್ನ ಆದ್ಯತೆ ಇದೆ. ನಾನು ತಮ್ಮ ಹತ್ತಿರ request ಮಾಡಿಕೊಂಡಿದ್ದೇನೆ. ತಾವು ಇದಕ್ಕೆ ಒಪ್ಪಿಕೊಂಡಿದ್ದೀರಿ. ದಯಮಾಡಿ ಚರ್ಚೆಗೆ ಅವಕಾಶವನ್ನು ಮಾಡಿಕೊಡಬೇಕು.

ಶ್ರೀ ಸಿದ್ದರಾಮಯ್ಯ : ಇದನ್ನು ನಾವು ಒಪ್ಪುವುದಕ್ಕಾಗುವುದಿಲ್ಲ. ಇಲ್ಲಿ ಸದನವು ನಡೆಯುವುದು. ಒಂದು ನಿಯಮಾವಳಿಗಳ ಪ್ರಕಾರ ನಡಯಬೇಕಾಗುತ್ತದೆ. ನಿಯಮಾವಳಿಗಳನ್ನು ಬಿಟ್ಟು ಅದನ್ನು ಗಾಳಿಗೆ ತೂರಿ ಚರ್ಚೆಯನ್ನು ಮಾಡುವುದಕ್ಕಾಗುವುದಿಲ್ಲ. ಈಗಾಗಲೇ ಪ್ರಾರಂಭವಾಗಿದೆ, 9ನೇ ತಾರೀಖು ಪ್ರಸ್ತಾಪ ಮಾಡಿರುವಂತಹ ವಿಷಯ ಅದು convert ಆಗಿ ರೂಲ್ 69ಕ್ಕೆ ಆಗಿ ಚರ್ಚೆಯು ಪ್ರಾರಂಭವಾಗಿದೆ. ಅದು ಇನ್ನು ಮುಕ್ತಾಯವಾಗಿಲ್ಲ. ಸರ್ಕಾರವು ಅದರ ಮೇಲೆ ಉತ್ತರವನ್ನು ಕೊಟ್ಟಿಲ್ಲ. ಇನ್ನೊಂದು ಯಾವುದೋ ಬಂದಿದೆ, ಅದು ಪತ್ರಿಕೆಯಲ್ಲಿ ಪ್ರಚಾರವಾಗಿಬಿಟ್ಟಿದೆ, ಅದು ಕೆಟ್ಟದಾಗಿ ಪ್ರಚಾರವಾಗಿದೆ, ಅದಕೋಸ್ಕರವಾಗಿ ಅದಕ್ಕೆ ಮೊದಲು ನಾವು ಉತ್ತರವನ್ನು

ಕೊಡುತ್ತೇನೆ ಎಂದು ಸರ್ಕಾರವು ಆ ತರಹ priority ಮಾಡುವುದಕ್ಕೆ ಬರುವುದಿಲ್ಲ. ಇದು ಮುಗಿಯಲಿ, ಆಮೇಲೆ ಏನು ಬೇಕಾದರೂ ಮಾಡಲಿ.

ಶ್ರೀ ಹೆಚ್. ಡಿ. ರೇವಣ್ಣ: ನಾನು 9ನೇ ತಾರೀಖು ನಿಲುವಳಿ ಸೂಚನೆಯನ್ನು ತಂದಿದ್ದೆ. ಮತ್ತೇ ನಾನು ನಿಲುವಳಿ ಸೂಚನೆಯನ್ನು ಕೊಟ್ಟಿದ್ದೇನೆ. ಅದನ್ನು ನಾನು ವಿರೋಧಪಕ್ಷದ ನಾಯಕರು ಗಮನಕ್ಕೂ ಕೂಡ ತರುತ್ತಿದ್ದೇನೆ. 9ನೇ ತಾರೀಖಿನ ಬಗ್ಗೆ ನಿಲುವಳಿ ಸೂಚನೆಯನ್ನು ಕೊಟ್ಟಿದ್ದೆ. ಮಾನ್ಯ ಮುಖ್ಯಮಂತ್ರಿಗಳು ಕೃಷಿ ಮತ್ತು ಗ್ರಾಮೀಣಾಭಿವೃದ್ಧಿ, ಮತ್ತೆ ಅದು ಆದಮೇಲೆ ಬರಗಾಲದ ಬಗ್ಗೆ ಆಯಿತು. ಮತ್ತೇ ನಿನ್ನೆ ಬೆಳಿಗ್ಗೆ ನಾನು ನಿಲುವಳಿ ಸೂಚನೆಯನ್ನು ಕೊಟ್ಟು ನಿನ್ನೆ ಮಧ್ಯಾಹ್ನ 4.30 ಗಂಟೆಗೆ ಎಂದು ಫಿಕ್ಸ್ ಮಾಡಿದ್ದರು. ಸನ್ಮಾನ್ಯ ಮುಖ್ಯಮಂತ್ರಿಗಳು ಮೈಸೂರಿನಲ್ಲಿ function ಇದೆ ಅದಕ್ಕೆ ಹೋಗಿದ್ದಾರೆಂದು 4.30 ಗಂಟೆಯಿಂದ ನಾನು ತಮಗೆ ಚರ್ಚೆಗೆ ಅವಕಾಶವನ್ನು ಕೊಡುತ್ತೇನೆಂದು ಮೊನ್ನೆ ರೂಲ್ 60 ಯಿಂದ 69ನಲ್ಲಿ ಮಾಡಿದ್ದಾರೆ. ಒಂದು ಕಡೆಯಲ್ಲಿ ನಾನು ವಿರೋಧಪಕ್ಷದ ನಾಯಕರಲ್ಲಿ, ಉಪನಾಯಕರನ್ನು, ಸಭಾನಾಯಕರನ್ನು ಮನವಿಯನ್ನು ಮಾಡುವುದು ಇಷ್ಟೆ. ಅವತ್ತು ಬಿಎಸಿ ಮೀಟಿಂಗ್‌ನಲ್ಲಿ ಏನು ತೀರ್ಮಾನವಾಗಿತ್ತು? ಅದರಲ್ಲಿ 3 ದಿನಗಳ ಕಾಲ ಈ ರಾಜ್ಯದ ಕೃಷಿ ಮತ್ತು ಗ್ರಾಮೀಣಾಭಿವೃದ್ಧಿಯ ಬಗ್ಗೆ ಚರ್ಚೆ ಮಾಡಬೇಕೆನ್ನುವುದು ಆಗಿತ್ತು. ಇದು ಮಾನ್ಯ ಮುಖ್ಯಮಂತ್ರಿಗಳ ಅಭಿಲಾಷೆಯಾಗಿತ್ತು. ಅದರ ಪ್ರಕಾರ ನಾನು ಯಾರು ಅಡ್ಡಿಪಡಿಸಿಲ್ಲ, ವಿರೋಧಪಕ್ಷದ ನಾಯಕರು ಸಹ ಅಡ್ಡಿ ಪಡಿಸಿಲ್ಲ. ಆದರೆ ಸನ್ಮಾನ್ಯ ಮುಖ್ಯಮಂತ್ರಿಗಳು ಉತ್ತರವನ್ನು ಕೊಡುವಂತಹ ಸಂದರ್ಭದಲ್ಲಿ ಬೆಳಿಗ್ಗೆ ನಿಲುವಳಿ ಸೂಚನೆ ಇದೆ. ನಾನು 9.30 ಗಂಟೆಗೆ ನಿಲುವಳಿ ಸೂಚನೆಯನ್ನು ಕೊಟ್ಟಿದ್ದೇನೆ. ನಾನು ಪ್ರಾಸ್ತಾವಿಕವಾಗಿ ಹೇಳಬೇಕಲ್ಲ. ನನಗೆ ಮಾಡನಾಡುವುದಕ್ಕೆ ಅವಕಾಶವನ್ನು ಕೊಡಿ.

ಅಧ್ಯಕ್ಷರು: ಬರಗಾಲದ ವಿಷಯವನ್ನು ಮೊದಲು ತೆಗೆದುಕೊಳ್ಳಬೇಕೋ ಅಥವಾ ನಿಮ್ಮ ವಿಷಯವನ್ನು ಮೊದಲು ತೆಗೆದುಕೊಳ್ಳಬೇಕೋ ಅದರ ಬಗ್ಗೆ ಮೊದಲು ನಿರ್ಧಾರವಾಗಲಿ. Details ಹೇಳುವುದಕ್ಕೆ ಹೋಗಬೇಡಿ. ಮೊದಲು ಅದನ್ನು ಹೇಳಿ.

ಶ್ರೀ ಹೆಚ್. ಡಿ. ರೇವಣ್ಣ: ನಾನು 1 ಗಂಟೆಯ ಒಳಗೆ ಮುಗಿಸುತ್ತೇನೆ. ಮೊದಲು ನನ್ನ ವಿಷಯವನ್ನು ತೆಗೆದುಕೊಳ್ಳಿ. ನಾನು ವಿರೋಧಪಕ್ಷದ ನಾಯಕರಲ್ಲಿಯೂ ಸಹ ನಾನು ಮನವಿಯನ್ನು ಮಾಡಿಕೊಳ್ಳುತ್ತೇನೆ.

ದಯಮಾಡಿ 1 ಗಂಟೆಯೊಳಗಡೆ ಮುಗಿಸುತ್ತೇನೆ. ದಯಮಾಡಿ ನನಗೆ ಅವಕಾಶವನ್ನು ಕೊಡಿ. ಸಭಾ ನಾಯಕರು ಸಹ ಒಪ್ಪಿಕೊಂಡಿದ್ದಾರೆ.

ಅಧ್ಯಕ್ಷರು: ಆ ರೀತಿಯಾಗಿ ಹೇಳಿ.

(ಗೊಂದಲ)

ಶ್ರೀ ಬಸವರಾಜ ಬೊಮ್ಮಾಯಿ : ಅಜೆಂಡಾದಲ್ಲಿ ಮೊದಲು ಯಾವುದಿದೆ, ವಿಧೇಯಕಗಳ ಮಂಡನೆ ಆದ ಮೇಲೆ ರೇವಣ್ಣವರು ಹೇಳಿದಂತೆ ಅಜೆಂಡಾದಲ್ಲಿ "ಶ್ರೀಯುತರುಗಳಾದ ಹೆಚ್. ಡಿ. ರೇವಣ್ಣ, ಸಿ.ಎಸ್. ಪುಟ್ಟೇಗೌಡ, ಸಿ.ಬಿ.ಸುರೇಶ್‌ಬಾಬು, ವೆಂಕಟರಾವ್ ನಾಡಗೌಡ, ಹೆಚ್. ಕೆ. ಕುಮಾರಸ್ವಾಮಿ ಹಾಗು ಇತರರು ಕರ್ನಾಟಕ ವಿದ್ಯುತ್ ನಿಗಮ ನಿಯಮಿತ ಸಂಸ್ಥೆಯು ನಿಯಮ ಬಾಹಿರವಾಗಿ ವಿವಿಧ ಸಂಸ್ಥೆಗಳಿಂದ ಆಮದಾದ ಕಲ್ಲಿದ್ದಲ್ಲನ್ನು ಖರೀದಿಸಿರುವುದರಿಂದ ರಾಜ್ಯದ ಬೊಕ್ಕಸಕ್ಕೆ ಕೋಟ್ಯಾಂತರ ರೂಪಾಯಿಗಳ ನಷ್ಟವುಂಟಾಗಿರುವ ಕುರಿತು ಚರ್ಚೆ, ಅದೇ ಮೊದಲಿದೆ, ಅಜೆಂಡಾ ಪ್ರಕಾರ ಹೋಗೋಣ.

ಅಧ್ಯಕ್ಷರು : ಅದು ಅವರಿಗೆ ಗೊತ್ತಿದೆ.

ಶ್ರೀ ಸಿದ್ದರಾಮಯ್ಯ (ಮಾನ್ಯ ವಿರೋಧ ಪಕ್ಷದ ನಾಯಕರು): ಮಾನ್ಯ ಅಧ್ಯಕ್ಷರೇ, ನಾನು ಅಜೆಂಡಾವನ್ನು ಓದಿದ್ದೇನೆ. ನಿಯಮ 69 ರಡಿಯಲ್ಲಿ ಶ್ರೀ ರೇವಣ್ಣನವರು ಎತ್ತಿರುವಂಥ ಕಲ್ಲಿದ್ದಲು ವಿಷಯವನ್ನು ತೆಗೆದುಕೊಳ್ಳಬೇಕೆಂದು ಮೊದಲನೇ ವಿಷಯವಾಗಿ ಬಂದಿದೆ. ನಿಮಗೆ ಯಾವಾಗಲೂ ಕೂಡ ಅಧಿಕಾರ ಇದೆ. ಏಕೆಂದರೆ ನಿನ್ನೆ ಜಯಚಂದ್ರರವರು ಮೊದಲು ಬರಗಾಲದ ಬಗ್ಗೆ ನಿಲುವಳಿ ಸೂಚನೆಯಲ್ಲಿ ಚರ್ಚೆಗೆ ಕೊಟ್ಟಿದ್ದರು. ರೇವಣ್ಣನವರು ಮೊದಲು ಪ್ರಸ್ತಾಪ ಮಾಡಿದ್ದರಿಂದ ಹೋಗಲಿ ಎಂದು ಇವರು ಸುಮ್ಮನಾದರು. ಹಾಗೆಂದು ನಾವು ಬರಗಾಲವನ್ನು ಬಿಟ್ಟು ಬೇರೆ ವಿಷಯವನ್ನು ಹೇಗೆ ಚರ್ಚೆ ಮಾಡುವುದು, ಸದನ ಇವತ್ತೇ ಕೊನೆ ದಿನವೆಂದು ಬೇರೆ ಹೇಳುತ್ತಿದ್ದೀರಿ. ಬರಗಾಲದ ಬಗ್ಗೆ ಅರ್ಧ ಚರ್ಚೆ ಮಾಡಿ ಅದಕ್ಕೆ ಉತ್ತರ ಸಿಗದೆ ಬೇರೆಯವರಿಗೆ ನಾವು ಅವಕಾಶ ಕೊಟ್ಟು ಬಿಟ್ಟು ನಾವು ಸುಮ್ಮನೆ ಕುಳಿತರೆ ಜನ ನಮ್ಮ ಬಗ್ಗೆ ಏನಂದುಕೊಳ್ಳುತ್ತಾರೆ. ಇಲ್ಲ, ಆದ್ದರಿಂದ ಮಾನ್ಯ ಅಧ್ಯಕ್ಷರೇ, ದಯಮಾಡಿ ನಾವು ಸಹ ನಿಮ್ಮಲ್ಲಿ ವಿನಂತಿ ಮಾಡುತ್ತೇವೆ, ನಾವು ಕೂಡ ಅಧಿಕೃತವಾದ ವಿರೋಧ ಪಕ್ಷದವರಾಗಿ ಬರಗಾಲದಲ್ಲಿ ಇಷ್ಟೊಂದು ಚರ್ಚೆ ಮಾಡಬೇಕೆಂದು ಬಂದರೆ ಇಲ್ಲ ನಾವು ಬೇರೆ ವಿಚಾರ ತೆಗೆದುಕೊಳ್ಳುತ್ತೀರಿ ಎಂದರೆ ಇದು ಸರಿಯಲ್ಲ, ನಿಯಮಾವಳಿ ಪ್ರಕಾರ ಮಾಡಬೇಕು. ಆದುದರಿಂದ ನಾವು ಎತ್ತಿರತಕ್ಕಂಥ ವಿಚಾರವನ್ನು ಮುಗಿದ ಮೇಲೆ ಬೇರೆ ವಿಚಾರ

ತೆಗೆದುಕೊಳ್ಳಬೇಕು. ಬರಗಾಲದ ಬಗ್ಗೆ ನಾನು ಮಾತನಾಡಿಲ್ಲ, ನಮ್ಮ ಸ್ನೇಹಿತರು ನಮ್ಮ ಕಡೆಯವರಾರೂ ಮಾತನಾಡಿಲ್ಲ. ನಾವು ಮಾತನಾಡಿದ ನಂತರ ನೀವು ನಾಳೆಯೂ ಸದನವನ್ನು ಮುಂದುವರೆಸಿ ಚರ್ಚೆ ಹಗರಣಗಳ ಬಗ್ಗೆ ಮಾಡೋಣ. ಇವತ್ತು ಬರಗಾಲದ ಬಗ್ಗೆ ಚರ್ಚೆಯಾಗಬೇಕು ಅದಕ್ಕೆ ಉತ್ತರ ಕೊಡಬೇಕಾಗುತ್ತದೆ. ಈಗ ಶ್ರೀನಿವಾಸ್ ಪ್ರಸಾದ್‌ರವರು ಈಗ ಮಾತನಾಡಲಿಕ್ಕೆ ಅವಕಾಶ ಕೊಡಿ.

ಅಧ್ಯಕ್ಷರು: ನಾನು ತೀರ್ಮಾನ ತೆಗೆದುಕೊಳ್ಳಬೇಕು. ಶ್ರೀನಿವಾಸ್ ಪ್ರಸಾದ್‌ರವರನ್ನು ನೀವು ಕರೆಯುವುದಲ್ಲ, ನಾನು ಕರೆಯಬೇಕು. ಇನ್ನೂ ಅದರ ಬಗ್ಗೆ ತೀರ್ಮಾನ ತೆಗೆದುಕೊಳ್ಳಬೇಕು. Whether we have to take your or Revanna's subject ಯಾವುದೆಂದು I will take a decision. ಈಗ ಯಾವ ವಿಷಯವನ್ನು ತೆಗೆದುಕೊಳ್ಳಬೇಕೆಂಬ ಬಗ್ಗೆ ನಾನು ಇನ್ನೂ ತೀರ್ಪು ತೆಗೆದುಕೊಳ್ಳುತ್ತೇನೆ. ಆಮೇಲೆ ಯಾವ ವಿಷಯ ಏನೆಂದು ತೀರ್ಮಾನ ತೆಗೆದುಕೊಳ್ಳುತ್ತೇನೆ. ಶ್ರೀನಿವಾಸ್ ಪ್ರಸಾದ್‌ರವರೇ ನಾನು ಇನ್ನೂ ಯಾರಿಗೂ allow ಮಾಡಿಲ್ಲ. ಯಾವುದನ್ನು ಮೊದಲು ತೆಗೆದುಕೊಳ್ಳಬೇಕೆಂಬ ಬಗ್ಗೆ ನಾನು ಇನ್ನು ಯಾರಿಗೂ allow ಮಾಡಿಲ್ಲ. ಅದರ ಬಗ್ಗೆ ನಾನು ನಿರ್ಣಯ ಕೊಡಬೇಕು. ಈಗ ವಿರೋಧ ಪಕ್ಷದ ನಾಯಕರು ವಿನಂತಿ ಮಾಡಿದ್ದಾರೆ. ಅಜೆಂಡಾದಲ್ಲಿ ರೇವಣ್ಣನವರ ವಿಷಯ ಮೊದಲು ಇದೆ. ಎರಡನೆ ವಿಷಯ ಬರಗಾಲದ್ದು ಇದೆ, ಅದಕ್ಕೆ ಮಾನ್ಯ ವಿರೋಧ ಪಕ್ಷದ ನಾಯಕರು ವಿನಂತಿ ಮಾಡಿದ್ದಾರೆ. ನಿಮ್ಮ ಅಧಿಕಾರವನ್ನು ಉಪಯೋಗ ಮಾಡಿಕೊಂಡು ನಿಮ್ಮ ಅಜೆಂಡಾವನ್ನು ಬದಲಾವಣೆ ಮಾಡಿ ಎಂದು ಹೇಳುತ್ತಿದ್ದಾರೆ.

SRI. SIDDARAMAIAH: No, No, I don't know how it has come in the agenda.

ಅಧ್ಯಕ್ಷರು : ಆ ಪರಿಸ್ಥಿತಿ ಹೇಗೆ ಬಂದಿತು ಎಂಬುದರ ಬಗ್ಗೆಯೂ ಹೇಳುತ್ತೇನೆ. ನನಗೆ ಮಾತನಾಡಲಿಕ್ಕೆ ಬಿಡಿ. ನೀವೇ ಶ್ರೀನಿವಾಸ್ ಪ್ರಸಾದ್‌ರವರಿಗೆ ಮಾತನಾಡಲಿಕ್ಕೆ ಕರೆದುಬಿಟ್ಟರೆ ಹೇಗೆ? ನಾನು ಇನ್ನೂ ಅದರ ಬಗ್ಗೆ ಚರ್ಚೆ ಮಾಡಲಿಕ್ಕೆ ಆ ನಿಯಮ 69 ಅನ್ನು allow ಮಾಡಿಲ್ಲ. ಯಾವುದನ್ನು ತೆಗೆದುಕೊಳ್ಳಬೇಕೆಂದು ನಾನು ಹೇಳುತ್ತೇನೆ. ನಿಯಮ 69 ರಡಿಯಲ್ಲಿ ಈಗ ಬರಗಾಲದ ಬಗ್ಗೆ ತೆಗೆದುಕೊಳ್ಳಬೇಕೋ, ರೇವಣ್ಣನವರ ವಿಚಾರ ತೆಗೆದುಕೊಳ್ಳಬೇಕೋ ಎಂಬುದನ್ನು ಇನ್ನು ನಾನು ನಿರ್ಣಯ ಮಾಡಿಲ್ಲ.

ಶ್ರೀ ಟಿ. ಬಿ. ಜಯಚಂದ್ರ : ಒಂದು submission, ರೊಟ್ಟಿಯನ್ನು ಯಾವ ಮೂಲೆಯಿಂದ ಮುರಿಯಬೇಕು ಅನ್ನುವುದು ಒಂದು ಗಾದೆಯಿದೆ, ಯಾವ ಮೂಲೆಯಿಂದ ಮುರಿದರೂ ಹೊಟ್ಟೆಗೆ ಹೋಗುವುದೇ......

ಅಧ್ಯಕ್ಷರು : ಜಯಚಂದ್ರರವರೇ, ನಿಮ್ಮ ಪ್ರತಿಪಕ್ಷದಲ್ಲಿ ನೀವೇ ಒಂದು conscious ಗೆ ಬಂದುಬಿಟ್ಟಿದ್ದರೆ ಈ ಸಮಸ್ಯೆಯೇ ಇರುತ್ತಿರಲಿಲ್ಲ. ನೀವೇ ವಿಚಾರ ಮಾಡಿಕೊಂಡು ಹೇಳಿಬಿಡಿ.

ಶ್ರೀ ಟಿ. ಬಿ. ಜಯಚಂದ್ರ: ಈ ಸದನ ಯಾವುದಕ್ಕೆ ಆದ್ಯತೆಯನ್ನು ಕೊಡುತ್ತದೆ ಎನ್ನುವುದು. ಹಗರಣಗಳಿಗೆ ಆದ್ಯತೆ ಕೊಡುತ್ತದೋ, ಬರಗಾಲಕ್ಕೆ ಆದ್ಯತೆ ಕೊಡುತ್ತದೋ? ಎನ್ನುವುದೇ ಈಗ ಮುಖ್ಯವಾದಂಥದ್ದು.

(ಗೊಂದಲ)

ಶ್ರೀ ಬಿ.ಎನ್. ಬಚ್ಚೇಗೌಡ : ಯಾವ ಮೂಲೆಯಿಂದ ರೊಟ್ಟಿ ಮುರಿದರೂ ಒಂದೇ, ಯಾರು ಮಾತನಾಡಿದರು ಅಷ್ಟೇ ಬಿಡಿ, ಏನಾಗುತ್ತದೆ.

(ಗೊಂದಲ)

ಅಧ್ಯಕ್ಷರು : ಪ್ರತಿಪಕ್ಷದವರು ನೀವೇ adjournment motion ಕೊಟ್ಟು ಈಗ ನೀವೇ ಈಗ ಈ ರೀತಿ ಮಾತನಾಡುವುದಾದರೆ ನಾನು ಹೇಗೆ ತೀರ್ಮಾನ ಮಾಡಲಿ?

(ಗೊಂದಲ)

ಅಧ್ಯಕ್ಷರು : I will take decision ಕುಳಿತುಕೊಳ್ಳಿ.

ಶ್ರೀ ಟಿ. ಬಿ. ಜಯಚಂದ್ರ: ಸದನದ ಎಲ್ಲರ ಅಭಿಪ್ರಾಯವನ್ನು ತೆಗೆದುಕೊಂಡು ತೀರ್ಮಾನ ಮಾಡಿ ನನ್ನದೇನೂ ಅಭ್ಯಂತರವಿಲ್ಲ.

ಶ್ರೀ ಸಿದ್ದರಾಮಯ್ಯ: ನಾನು ಕಳಕಳಿಯಿಂದ ಕೇಳುತ್ತೇನೆ.

ಅಧ್ಯಕ್ಷರು : ಸಿದ್ದರಾಮಯ್ಯ, ಈಗ ನೀವು ಅವರೂ ಮಾತನಾಡಿ ಯಾವ ವಿಷಯ ಎಂದು conscious ಆಗಿ ಹೇಳಿದರೆ ಮುಗಿದುಹೋಯಿತು. ಹಾಗಾದರೆ ನನಗೆ ತೀರ್ಪು ಕೊಡಲಿಕ್ಕೆ ಬಿಡಿ. ನಾನು ಅದರ ಬಗ್ಗೆ ನಿರ್ಣಯ ಕೊಡುತ್ತೇನೆ. ಅಜೆಂಡಾದಲ್ಲಿ ಆ ವಿಷಯ ಏಕೆ ಬಂತು ಎನ್ನುವುದರ ಬಗ್ಗೆ ನಾನು ಹೇಳುತ್ತೇನೆ, ನಾನು ಮಾತನಾಡಲಿಕ್ಕೆ ಅವಕಾಶವೇ ಕೊಡುತ್ತಿಲ್ಲವಲ್ಲ. ನಾನು ಹೇಳುತ್ತೇನೆ.

ಶ್ರೀ ಸಿದ್ದರಾಮಯ್ಯ: ಈಗಾಗಲೇ ಆ ವಿಷಯದ ಬಗ್ಗೆ ಚರ್ಚೆ ಪ್ರಾರಂಭವಾಗಿದೆ. ಚರ್ಚೆ ಆಗಿರುವುದು ಪ್ರಾಮುಖ್ಯವೋ, ಹೊಸ ವಿಚಾರಕ್ಕೆ ಅವಕಾಶ ಕೊಡುವುದು ಮುಖ್ಯವೇ?

ಅಧ್ಯಕ್ಷರು: ಅಜೆಂಡಾದಲ್ಲಿ ಏಕೆ ಬಂತು ಎನ್ನುವ ಬಗ್ಗೆಯೂ ಸಹ ನಾನು ಹೇಳುತ್ತೇನೆ. ನೀವು ಅದನ್ನು ಹೇಳಲಿಕ್ಕೆ ಅವಕಾಶ ಕೊಡುತ್ತಿಲ್ಲ.

ಶ್ರೀ ಸಿದ್ದರಾಮಯ್ಯ: ಹೇಳಿ, ನೀವು ತೀರ್ಪು ಕೊಡುವುದಕ್ಕಿಂತ ಮುಂಚಿತವಾಗಿ ಆ ವಿಷಯ ಏಕೆ ಬಂತು ಅದನ್ನು ಹೇಳಿ.

ಅಧ್ಯಕ್ಷರು: ನಿನ್ನೆ ಬೆಳಿಗ್ಗೆ ಮಾನ್ಯ ರೇವಣ್ಣನವರು ಒಂದು ನಿಲುವಳಿ ಸೂಚನೆಯನ್ನು ಮಂಡನೆ ಮಾಡಿ Preliminary Submission ಮಾಡಿದರು. ಆ ಸಂದರ್ಭದಲ್ಲಿ ನನ್ನ ಛೇಂಬರ್‌ಗೆ ಮಾನ್ಯ ಜಯಚಂದ್ರರವರು ಬಂದಿದ್ದರು. ಆ KIADB ಗೆ ಸಂಬಂಧಪಟ್ಟಂತೆ ನಮ್ಮದು ಒಂದು ನಿಲುವಳಿ ಸೂಚನೆ ಇದೆ, ನಮಗೂ ಅವಕಾಶ ಕೊಡಬೇಕೆಂದು ವಿನಂತಿ ಮಾಡಿದರು. ಆಮೇಲೆ ನಿಮ್ಮಿಬ್ಬರಲ್ಲೇ ನೀವು preference ಮಾಡಿಕೊಳ್ಳಿ, ಒಂದು ಇವತ್ತು ಅವರಿಗೆ ಅವಕಾಶ ಕೊಡುತ್ತೇನೆ. ಮತ್ತೊಂದು ನಾಳೆಗೆ ಅವಕಾಶ ಕೊಡುತ್ತೇನೆ ಎಂದು ಅವರಿಬ್ಬರ ವಿನಂತಿ ಮೇರೆಗೆ ರೇವಣ್ಣನವರು ಬೆಳಿಗ್ಗೆ ಅದನ್ನು ಪ್ರಸ್ತಾಪ ಮಾಡಿದರು. ಜಯಚಂದ್ರರವರಿಗೆ ನಾನು ನಾಳೆ ಇದನ್ನು ಪ್ರಸ್ತಾಪ ಮಾಡಿ ಎಂದು ಪ್ರಾಮಿಸ್ ಮಾಡಿದ್ದೆನು, ಈಗ ರೇವಣ್ಣನವರದು ನಿನ್ನೆಯೆ ಮುಗಿಸಬೇಕೆಂದು ನಿರ್ಣಯವಾಗಿತ್ತು, ನಿನ್ನೆ ಬೆಳಿಗ್ಗೆ ಪ್ರಸ್ತಾಪ ಮಾಡಿದರು, ಐದು ನಿಮಿಷ ಅವರು ಅದನ್ನು submission ಮಾಡಿದ ಮೇಲೆ ಮಾನ್ಯ ಮುಖ್ಯಮಂತ್ರಿಯವರು ಮೈಸೂರಿಗೆ ಹೋಗಿದ್ದರು, ಮಾನ್ಯ ಮುಖ್ಯಮಂತ್ರಿಗಳು ನಾನು ಮಧ್ಯಾಹ್ನ ಸದನಕ್ಕೆ ಬಂದ ಮೇಲೆ ಅದನ್ನು ಚರ್ಚೆಗೆ ತೆಗೆದುಕೊಳ್ಳಬೇಕೆಂದು ಅವರೂ ಸಹ ನನ್ನಲ್ಲಿ ವಿನಂತಿ ಮಾಡಿದ್ದರು. ಆ ಸಂದರ್ಭದಲ್ಲಿ ನಾನು ಸದನದಲ್ಲಿ ಏನೊಂದು ತೀರ್ಪು ಕೊಟ್ಟೆ ಅದನ್ನು ನಿಯಮ 69ಕ್ಕೆ convert ಮಾಡಿ ಸಂಜೆ 4.30ಕ್ಕೆ ಅದರ ಬಗ್ಗೆ ಚರ್ಚಿಸಲು ಅವಕಾಶ ಕೊಟ್ಟೆ. ಮಾನ್ಯ ಮುಖ್ಯಮಂತ್ರಿಗಳು ಆ ಸಮಯಕ್ಕೆ ಬಂದರು, ಆದರೆ 3.00 ಗಂಟೆಗೆ ಬರಗಾಲ ವಿಷಯಕ್ಕೆ ಸಂಬಂಧಪಟ್ಟಂತೆ ಆ ನಿಯಮ 69ರ ಪ್ರಕಾರ ಚರ್ಚೆಯನ್ನು ಮುಂದುವರಿಸಿದೆ, ಆ ಚರ್ಚೆ 4.30–5.00 ಗಂಟೆಗೆ ಮುಗಿದಂಥ ಸಂದರ್ಭದಲ್ಲಿ ಮತ್ತೆ ಈ ಸದನದ ಒಂದು conscience ತೆಗೆದುಕೊಂಡಾಗ ಇನ್ನೂ ಈ ಚರ್ಚೆಯನ್ನು 7.00 ಗಂಟೆಯವರೆಗೆ ನಡೆಸಿ ಇನ್ನೂ ಹೆಚ್ಚು ಶಾಸಕರಿಗೆ ಬರಗಾಲದ ಬಗ್ಗೆ ಮಾತನಾಡಲಿಕ್ಕೆ ಅವಕಾಶ ಕೊಡಬೇಕೆಂಬ ಅಭಿಪ್ರಾಯ ಬಂದಾಗ ನಿನ್ನೆ 7.00 ಗಂಟೆಯವರೆಗೆ ನಿನ್ನೆ ಬಹುಶ: 10–15 ಶಾಸಕರು ಆ ಚರ್ಚೆಯಲ್ಲಿ ಭಾಗವಹಿಸಿ ಬರಗಾಲದ ವಿಷಯದ ಬಗ್ಗೆ ಚರ್ಚೆ ಮಾಡಲಾಯಿತು. ಆಮೇಲೆ ಇವತ್ತು ಬೆಳಿಗ್ಗೆ

ರೇವಣ್ಣನವರ ವಿಚಾರ ಚರ್ಚೆಗೆ ತೆಗೆದುಕೊಳ್ಳುತ್ತೇನೆ ಎಂದು ಹೇಳಿದೆ, ಏಕೆಂದರೆ ಈ ವಿಷಯ ನಿನ್ನೆ 4.30 ಗಂಟೆಗೆ ಚರ್ಚೆಯಾಗಬೇಕಾಗಿತ್ತು. ಹಾಗಾದರೆ 3.00 ಗಂಟೆಯಿಂದ 4.30 ಗಂಟೆಯಲ್ಲಿ break ಮಾಡಿ ಈ ಚರ್ಚೆಗೆ ಅವಕಾಶ ಕೊಡಬೇಕಾಗಿತ್ತು. ಬರಗಾಲ ಆಗ ಮತ್ತೆ discontinue ಆಗುತ್ತಿತ್ತು. ಆ ದೃಷ್ಟಿಯಿಂದ ಅವರಿಗೆ preference ಕೊಟ್ಟು ಇವತ್ತು ಅಜೆಂಡಾದಲ್ಲಿ ಮೊದಲನೆಯ ವಿಷಯವಾಗಿ ಇಟ್ಟಿದ್ದೇನೆ. ಇದಕ್ಕೆ ಒಂದು ಗಂಟೆಯನ್ನು ನಾನು ನಿಗದಿ ಮಾಡುತ್ತೇನೆ. ಆ ಒಂದು ಗಂಟೆಯಾದ ನಂತರ ಮತ್ತೆ ಬರಗಾಲದ ಬಗ್ಗೆ ನಾವು ಚರ್ಚೆಯನ್ನು ಮುಂದುವರೆಸಬಹುದು.

ಶ್ರೀ ಸಿದ್ದರಾಮಯ್ಯ: ಈ ಸದನವನ್ನು ಕರೆದಿರುವುದೇ ಬಹಳ ಮುಖ್ಯವಾಗಿ ರೈತರ, ಗ್ರಾಮೀಣಾಭಿವೃದ್ಧಿ ಬಗ್ಗೆ ಚರ್ಚೆ ಮಾಡಲಿಕ್ಕೆ, ಕೃಷಿ ಬಗ್ಗೆ ಚರ್ಚೆ ಮಾಡಲಿಕ್ಕೆ. ಬರಗಾಲದ ಬಗ್ಗೆ ಚರ್ಚೆ ಮಾಡಬೇಕು. ರೈತರ ಬವಣೆಗಿಂತ ಇದು ಬಹಳ ಮುಖ್ಯವೇನು? No, No, ಇದು ಮುಗಿಯಬೇಕು, ಇದು ಮುಗಿದ ಮೇಲೆ ಯಾವುದಾದರು ಚರ್ಚೆ ಮಾಡಲಿ. ಬರಗಾಲಕ್ಕೆ ಸರ್ಕಾರದಿಂದ ಉತ್ತರ ಕೊಟ್ಟಾಯಿತೇ?

ಶ್ರೀ ಬಸವರಾಜ ಬೊಮ್ಮಾಯಿ: ಮಾನ್ಯ ಅಧ್ಯಕ್ಷರು ರೂಲಿಂಗ್ ಕೊಟ್ಟಿದ್ದಾರೆ, ಅವರು ರೂಲಿಂಗ್ ಕೊಟ್ಟಿರುವುದನ್ನು ನಾವು ನೀವು ಇಬ್ಬರು ಒಪ್ಪಿಕೊಳ್ಳಬೇಕು. ಒಂದು ಗಂಟೆ ಎಂದು ಹೇಳಿದ್ದಾರೆ.

ಶ್ರೀ ಸಿದ್ದರಾಮಯ್ಯ: ರೂಲಿಂಗ್ ಎಲ್ಲಿ ಕೊಟ್ಟಿದ್ದಾರೆ?

ಅಧ್ಯಕ್ಷರು: ನಾನು ಈಗ ರೇವಣ್ಣನವರ ವಿಷಯಕ್ಕೆ ಒಂದು ಗಂಟೆ ಕಾಲಾವಕಾಶ ನಿಗದಿ ಮಾಡಿದ್ದೇನೆ. ಒಂದು ಗಂಟೆ ಸಮಯದಲ್ಲಿ ಮುಕ್ತಾಯ ಮಾಡಿ, ನಿಮ್ಮ ಚರ್ಚೆಗೆ ಉತ್ತರ ಕೊಡಲಿ, ನಂತರ ನಾನು ಬರಗಾಲದ ಚರ್ಚೆಗೆ ಅವಕಾಶ ಕೊಡುತ್ತೇನೆ.

ಶ್ರೀ ಸಿದ್ದರಾಮಯ್ಯ: ಮಾನ್ಯ ಅಧ್ಯಕ್ಷರೆ, ನಾನು ಇದನ್ನು ಒಪ್ಪುವುದಿಲ್ಲ. No, No, I don't agree.

(ಗೊಂದಲ)

(ಈ ಹಂತದಲ್ಲಿ ಮಾನ್ಯ ವಿರೋಧ ಪಕ್ಷದ ನಾಯಕರಾದ ಶ್ರೀ ಸಿದ್ದರಾಮಯ್ಯನವರು ಹಾಗೂ ಕಾಂಗ್ರೆಸ್ ಪಕ್ಷದ ಸದಸ್ಯರೆಲ್ಲರೂ ಧರಣಿ ಮಾಡಲು ಬಾವಿಗಿಳಿದು ಸರ್ಕಾರದ ವಿರುದ್ಧ ಘೋಷಣೆ ಕೂಗುತ್ತಿದ್ದರು)

ಶ್ರೀ ಬಸವರಾಜ ಬೊಮ್ಮಾಯಿ: ನೀವು ಯಾರ ವಿರುದ್ಧ ಧರಣಿ ಮಾಡುತ್ತಿದ್ದೀರಿ? ಸ್ಪೀಕರ್ ರೂಲಿಂಗ್ ವಿರುದ್ಧ ಧರಣಿ ಮಾಡುತ್ತಿರುವಿರಾ?

ಅಧ್ಯಕ್ಷರು: ನಿನ್ನೆ ಎಲ್ಲರಿಗೂ ಅವಕಾಶ ಕೊಟ್ಟಿದ್ದೇನೆ. ಪದೇ ಪದೇ ಒಂದು ಕಡೆ ರೇವಣ್ಣನವರು, ಒಂದು ಕಡೆ ಪ್ರತಿಪಕ್ಷದವರು, ನಿಮ್ಮಲ್ಲೆ ಪರಸ್ಪರ ಹೊಂದಾಣಿಕೆ ಇಲ್ಲ. ಮೊದಲು ನಿಮ್ಮಲ್ಲಿ ಹೊಂದಾಣಿಕೆ ಮಾಡಿಕೊಳ್ಳಿ.

ಶ್ರೀ ಬಸವರಾಜ ಬೊಮ್ಮಾಯಿ: ನಾವು ಇಲ್ಲಿ ಕುಳಿತಿರುವುದು ನಿರ್ಣಯ ಮಾಡುವುದಕ್ಕೆ ಆಗುವುದಿಲ್ಲ, ಒಂದು ನಿಮಿಷ, ಯಾವುದಾದರೂ ಒಂದು ವಿಷಯದಲ್ಲಿ conscious ಇರಬೇಕು, ಇಲ್ಲವಾದರೆ ಅಧ್ಯಕ್ಷರ ತೀರ್ಮಾನವನ್ನು ಒಪ್ಪಿಕೊಳ್ಳಬೇಕು. ಅವರ ನಿರ್ಣಯವನ್ನು ಒಪ್ಪಿಕೊಳ್ಳದಿದ್ದರೆ ಹೇಗೆ?

ಅಧ್ಯಕ್ಷರು: ಮೊದಲು ನಿಮ್ಮಲ್ಲಿ ಹೊಂದಾಣಿಕೆ ಮಾಡಿಕೊಂಡು ನಡೆದುಕೊಳ್ಳಿ, ನಿಮಗೆ ಎಲ್ಲದಕ್ಕೂ ಅವಕಾಶ ಕೊಟ್ಟರೂ ಸಹಿತ ಪದೇಪದೇ ಎಲ್ಲದಕ್ಕೂ ನಿಲ್ಲುವುದು, ಇದು ಸರಿಯಲ್ಲ, ಸಭಾಧ್ಯಕ್ಷರು ಒಂದು ಸಾರಿ ರೂಲಿಂಗ್ ಕೊಟ್ಟ ಮೇಲೆ ಅದನ್ನು ಪ್ರಶ್ನೆ ಮಾಡುವುದು ಸರಿಯಲ್ಲ. ಎಲ್ಲಾ ನಿಯಮಗಳ ಪ್ರಕಾರ ನಡೆಯುತ್ತದೆ.

ಶ್ರೀ ಬಸವರಾಜ ಬೊಮ್ಮಾಯಿ: ಒಂದು ನಿಮಿಷ, ಅಧ್ಯಕ್ಷರ ರೂಲಿಂಗ್ ಅನ್ನೆ ನೀವು ಪ್ರಶ್ನೆ ಮಾಡುತ್ತೀರೆಂದರೆ ಹೇಗೆ? Are you questioning Speaker's Ruling?

(ಗೊಂದಲ)

ಶ್ರೀ ಬಿ. ಎಸ್. ಯಡಿಯೂರಪ್ಪ : ನಿಮಗೆಲ್ಲೋ ತಲೆ ಕೆಟ್ಟಿದೆ. ನಾಚಿಕೆಯಾಗಬೇಕು ನಿಮಗೆ.

(ಗೊಂದಲ)

ಅಧ್ಯಕ್ಷರು : ಬಾವಿಯಲ್ಲಿ ನಿಂತು ಮಾತನಾಡಿದ್ದು ಯಾವುದು ದಾಖಲಾಗುವುದಿಲ್ಲ.

(ಗೊಂದಲ)

ಶ್ರೀ ಬಸವರಾಜ ಬೊಮ್ಮಾಯಿ: ನಿನ್ನೆ ಅವರು ಧರಣಿಗೆ ಬಂದಾಗ ನೀವು ಹೇಳಬೇಕಾಗಿತ್ತು ನಾವು ಬರಗಾಲದ ವಿಷಯವನ್ನು ಚರ್ಚೆಗೆ ತೆಗೆದುಕೊಳ್ಳುತ್ತೇವೆಂದು. ಆಗ ಎಲ್ಲೋ ಹೋಗಿತ್ತು ಈ ಕಾಳಜಿ. ನಿಮ್ಮ ನಿಮ್ಮ ರಾಜಕೀಯದ ಗಲಭೆಯಲ್ಲಿ ನೀವುಗಳು ಇಂದು ಸದನವನ್ನು ನೀವು ಬ್ಲಾಕ್‌ಮೇಲ್ ಮಾಡುತ್ತಿದ್ದೀರಿ.

ಅಧ್ಯಕ್ಷರು: ನಾನು ಎರಡು ಗಂಟೆಗಳವರೆಗೆ ಎಲ್ಲರಿಗೂ ನಿನ್ನೆ ಅವಕಾಶ ಕೊಟ್ಟಿದೇನೆ. ಬರಗಾಲದ ಬಗ್ಗೆ ಚರ್ಚೆ ಆಗಲಿಲ್ಲವೇ? ಚರ್ಚೆಗೆ ಅವಕಾಶವೇ ಕೊಡುತ್ತಿಲ್ಲ, ಒಂದು ಸಾರಿ ಅವರು ಧರಣಿ ಮಾಡುತ್ತಾರೆ, ಒಂದು ಸಾರಿ ನೀವು ಧರಣಿ ಮಾಡುತ್ತೀರಿ.

(ಗೊಂದಲ)

ಶ್ರೀ ಕೆ. ಎಸ್. ಈಶ್ವರಪ್ಪ : ಪ್ರತಿಪಕ್ಷದ ನಾಯಕರಿಗೆ ನಾನು ಹೇಳುತ್ತೇನೆ. ನಿನ್ನೆಯಾದರೂ ಈ ಮಾತು ಹೇಳಬಹುದಿತ್ತು. ಈಗ ಸಭಾಧ್ಯಕ್ಷರು ರೂಲಿಂಗ್ ಕೊಟ್ಟಿದ್ದಾರೆ, ಅವರ ವಿರುದ್ಧ ಕಾಂಗ್ರೆಸ್ ಪಕ್ಷ ಧರಣಿ ಕೂಡುತ್ತಿರುವುದು ರಾಜ್ಯದಲ್ಲೇ ಅಲ್ಲ, ದೇಶದಲ್ಲೇ ನಾನು ನೋಡಿಲ್ಲ. ಇದು ಕರ್ನಾಟಕ ರಾಜ್ಯದಲ್ಲೇ ಮೊದಲನೇ ಸಾರಿ ನಡೆಯುತ್ತಿರುವುದು. ಇದು ಯಾವ ನ್ಯಾಯವೆಂದು ನನಗೆ ಅರ್ಥವಾಗುತ್ತಿಲ್ಲ.

(ಗೊಂದಲ)

(ಈ ಹಂತದಲ್ಲಿ ವಿರೋಧ ಪಕ್ಷದ ಸದಸ್ಯರು ಸದನದ ಬಾವಿಯಲ್ಲಿ ಧರಣಿಯಲ್ಲಿ ನಿರತರಾಗಿದ್ದರು)

ಶ್ರೀ ಕೆ. ಎಸ್. ಈಶ್ವರಪ್ಪ : ಮಾನ್ಯ ಸಭಾಧ್ಯಕ್ಷರ ವಿರುದ್ಧ ಕಾಂಗ್ರೆಸ್ ಪಕ್ಷ ಧರಣಿಗೆ ಕುಳಿತಿರುವುದನ್ನು ಬರೀ ರಾಜ್ಯದಲ್ಲಿ ಅಲ್ಲ, ನಾನು ಇಡೀ ದೇಶದಲ್ಲೇ ನೋಡಿಲ್ಲ. ಸಭಾಧ್ಯಕ್ಷರ ವಿರುದ್ಧ ಕಾಂಗ್ರೆಸ್ ಪಕ್ಷ ಧರಣಿಗೆ ಕುಳಿತಿರುವುದು ದೇಶದಲ್ಲೇ ಮೊದಲನೇ ಬಾರಿ ಎಂದರೆ ಅದು ಕರ್ನಾಟಕ ರಾಜ್ಯದಲ್ಲಿ ಮಾತ್ರ. ಇದು ಯಾವ ನ್ಯಾಯ ಎಂದುನನಗೆ ಅರ್ಥವಾಗುತ್ತಿಲ್ಲ.'

(ಗೊಂದಲ)

ಶ್ರೀ ಸಿದ್ದರಾಮಯ್ಯ: ಇದು ಮಾನ್ಯ ಮುಖ್ಯಮಂತ್ರಿಗಳ ವಿರುದ್ಧ. ನಿಮ್ಮ ವಿರುದ್ಧವಲ್ಲ. ನಿಮ್ಮ ನಿರ್ಣಯದ ವಿರುದ್ಧವಲ್ಲ. ಮಾನ್ಯ ಮುಖ್ಯಮಂತ್ರಿಗಳು ಇಲ್ಲಿ ಬಂದು ಬರಗಾಲದ ವಿಷಯವಾಗಿ ಚರ್ಚೆ ಮಾಡುವುದನ್ನು ಬಿಟ್ಟು ಹಗರಣಗಳ ಮೇಲೆ ಚರ್ಚೆ ಮಾಡಿ ಎಂದರೆ ನಾವು ಏಕೆ ಮಾಡಬೇಕು.

(ಗೊಂದಲ)

ಅಧ್ಯಕ್ಷರು : ದಯವಿಟ್ಟು ತಾವು ತಮ್ಮ ಸ್ಥಾನಗಳಿಗೆ ಹೋಗಿ. ಒಂದೊಂದು ವಿಷಯವನ್ನು ಪ್ರತ್ಯೇಕವಾಗಿ ಚರ್ಚೆಗೆ ತೆಗೆದುಕೊಳ್ಳೋಣ. ಮೊದಲು ರೂಲ್ 69ರ ಬಗ್ಗೆ ಚರ್ಚೆ ಮಾಡೋಣ. ನಂತರ ಬರಗಾಲದ ಬಗ್ಗೆಯೂ ಚರ್ಚೆ ಮಾಡೋಣ. (ಗೊಂದಲ) ದಯವಿಟ್ಟು ತಮ್ಮ ಸ್ಥಾನಗಳಿಗೆ ಹೋಗಿ. ಅದಕ್ಕೂ ಸಹ ಚರ್ಚೆಗೆ ಅವಕಾಶ ಕೊಡುತ್ತೇನೆ. ಇವತ್ತು ರಾತ್ರಿ 8 ಗಂಟೆಯವರೆಗೆ ಮಾತನಾಡಿ. ನಿನ್ನೆ 7 ಗಂಟೆಯವರೆಗೆ ಸದನದಲ್ಲಿ ಕುಳಿತ್ತಿದ್ದೇವೆ. ಇವತ್ತು ರಾತ್ರಿ 8 ಗಂಟೆಯವರೆಗೆ ಎಲ್ಲರೂ ಕುಳಿತು ಚರ್ಚೆ ಮಾಡೋಣ. ಮಾನ್ಯ ಸಿದ್ದರಾಮಯ್ಯನವರೇ, ಅದರ ಬಗ್ಗೆ ಮಾತನಾಡಲು ಸಹ ಅವಕಾಶ ಕೊಡುತ್ತೇನೆ. (ಗೊಂದಲ) ಮಾನ್ಯ ಸಿದ್ದರಾಮಯ್ಯನವರೇ, ಬರಗಾಲದ ವಿಷಯ ಮಹತ್ವವಾದದ್ದು, ಅದರ ಬಗ್ಗೆ ಮಾತನಾಡಲು ಅವಕಾಶ ಕೊಡುತ್ತೇನೆ. ರೂಲ್

69ಅನ್ನು ಒಂದು ತಾಸಿನಲ್ಲಿ ಮುಗಿಸೋಣ. ದಯವಿಟ್ಟು ತಮ್ಮ ಸ್ಥಾನಗಳಿಗೆ ಹೋಗಿ. ಹೀಗಾದರೆ ಏನಾಗುತ್ತದೆ ಎಂದರೆ ವಿಶೇಷ ಅಧಿವೇಶನವನ್ನು ನಾವು ಏಕೆ ಕರೆದಿದ್ದೇವೆ? (ಗೊಂದಲ) ಚರ್ಚೆಯಾಗಬೇಕು. ಯಾವುದಾದರೂ ಒಂದು ವಿಷಯ ಚರ್ಚೆಯಾಗಬೇಕು. ಎಲ್ಲವೂ ಮಹತ್ವವಾದಂಥ ವಿಷಯಗಳೇ ಆಗಿವೆ. ಎಲ್ಲಾ ವಿಷಯಗಳು ಚರ್ಚೆಯಾಗಬೇಕು. (ಗೊಂದಲ) ದಯವಿಟ್ಟು ತಮ್ಮ ಸ್ಥಾನಗಳಿಗೆ ಹೋಗಿ, ಕುಳಿತುಕೊಳ್ಳಿ.

(ಗೊಂದಲ)

ಶ್ರೀ ಕೆ. ಎಸ್. ಈಶ್ವರಪ್ಪ : ಮಾನ್ಯ ಅಧ್ಯಕ್ಷರೆ, ಕಾಂಗ್ರೆಸ್ ಪಾರ್ಟಿ ಒಂದು National Party ಪಾರ್ಟಿಯಾಗಿದೆ. (ಗೊಂದಲ) ಸಭಾಧ್ಯಕ್ಷರ ವಿರುದ್ಧ, ರೂಲಿಂಗ್ ಧರಣಿ ಕುಳಿತಿದ್ದಾರೆ ಎಂದರೆ ಇದು ಪ್ರಜಾಪ್ರಭುತ್ವಕ್ಕೆ ಮಾಡುತ್ತಿರುವಂಥ ಅನ್ಯಾಯ. ಯಾವುದೇ ಕಾರಣಕ್ಕೂ ಸಭಾಧ್ಯಕ್ಷರ ರೂಲಿಂಗ್ ವಿರುದ್ಧವಾಗಿ ಧರಣಿ ಕುಳಿತುಕೊಳ್ಳಬಾರದು.

(ಗೊಂದಲ)

ಶ್ರೀ ಸಿದ್ದರಾಮಯ್ಯ: ಇದು ಮಾನ್ಯ ಮುಖ್ಯಮಂತ್ರಿಗಳ ವಿರುದ್ಧ. ರೈತರ ಬಗ್ಗೆ ಇವರಿಗೆ ಕಾಳಜಿಯಿಲ್ಲ. ಇವರು ಬರಗಾಲಕ್ಕಾಗಿ ಒಂದು ರೂಪಾಯಿಯನ್ನು ಖರ್ಚು ಮಾಡಿಲ್ಲ.

(ಗೊಂದಲ)

ಅಧ್ಯಕ್ಷರು: ದಯವಿಟ್ಟು ಎಲ್ಲರೂ ತಮ್ಮ ಸ್ಥಾನಗಳಿಗೆ ಹೋಗಿ ಕುಳಿತುಕೊಳ್ಳಿ. ಈಗ ಸದನವನ್ನು 15 ನಿಮಿಷಗಳ ಕಾಲ ಮುಂದೂಡುತ್ತೇನೆ.

(ಸದನವು ಬೆಳಿಗ್ಗೆ 11 ಗಂಟೆ 52 ನಿಮಿಷಕ್ಕೆ ಮುಕ್ತಾಯಗೊಂಡು ಪುನ: 15 ನಿಮಿಷಗಳ ನಂತರ ಸೇರಲು ನಿಶ್ಚಯಿಸಿತು)

(ಸದನವು ಮತ್ತೆ ಮಧ್ಯಾಹ್ನ 1 ಗಂಟೆ 06 ನಿಮಿಷಕ್ಕೆ ಪುನರ್ ಸಮಾವೇಶಗೊಂಡಿತು. ಅಧ್ಯಕ್ಷ ಪೀಠದಲ್ಲಿ ಸಭಾಧ್ಯಕ್ಷರಾದ ಶ್ರೀ ಜಗದೀಶ್ ಶೆಟ್ಟರ್‌ರವರು ಉಪಸ್ಥಿತರಿದ್ದರು)

ಅಧ್ಯಕ್ಷರು: ಸಭೆಯ ಗಮನಕ್ಕೆ ತಿಳಿಸಬಯಸುವ ವಿಷಯವೇನೆಂದರೆ, ಮಾನ್ಯ ಪ್ರತಿ ಪಕ್ಷದ ನಾಯಕರು ಮತ್ತು ಜೆ.ಡಿ. (ಎಸ್)ನ ಫ್ಲೋರ್ ಲೀಡರ್ ಮತ್ತು ಕೆಲವೊಂದು ಮಾನ್ಯ ಸಚಿವರು ನನ್ನ ಛೇಂಬರ್‌ಗೆ ಬಂದು ಯಾವ ಯಾವ ವಿಷಯಗಳನ್ನು ಯಾವ ಯಾವ ಸಂದರ್ಭದಲ್ಲಿ ಚರ್ಚೆಗೆ ತೆಗೆದುಕೊಳ್ಳಬೇಕು

ಎನ್ನುವ ಬಗ್ಗೆ ಚರ್ಚೆ ಮಾಡಿ ನಾವೆಲ್ಲರೂ ಸೇರಿ ಈಗ ಒಂದು ಅಭಿಪ್ರಾಯಕ್ಕೆ ಬಂದಿದ್ದೇವೆ. ಈಗಾಗಲೇ ನಾನೇನು ತೀರ್ಪನ್ನು ಕೊಟ್ಟಿದ್ದೆ ಅದನ್ನು Re-consider ಮಾಡಿ ಎಂದು ಪ್ರತಿ ಪಕ್ಷದ ನಾಯಕರು Request ಮಾಡಿದ್ದರು. ಆ ಹಿನ್ನೆಲೆಯಲ್ಲಿ ಇವತ್ತು ನಾವೆಲ್ಲರೂ ಕುಳಿತು ಒಂದು ತೀರ್ಮಾನಕ್ಕೆ ಬಂದಿದ್ದೇವೆ. ಈಗ ಎಲ್ಲ ವಿಷಯಗಳೂ ಚರ್ಚೆಯಾಗಬೇಕಾಗಿದೆ. ಆ ದೃಷ್ಟಿಯಿಂದ ಯಾವುದಕ್ಕೆ ಮಹತ್ವ ಕೊಡಬೇಕು, ಯಾವುದಕ್ಕೆ ಇಲ್ಲವೆನ್ನುವಂಥದಲ್ಲ. ಎಲ್ಲ ವಿಷಯಗಳೂ ಮಹತ್ವದ ವಿಷಯಗಳೇ ಆಗಿವೆ. ಆ ದೃಷ್ಟಿಯಿಂದ ಮೊದಲು ಬರಗಾಲದ ವಿಷಯದ ಬಗ್ಗೆಯೂ ಇನ್ನೂ ಮಾತನಾಡಬೇಕು ಎಂದು ಪ್ರತಿ ಪಕ್ಷದ ನಾಯಕರು ಮತ್ತು ಇತರ ಹಿರಿಯ ಸದಸ್ಯರುಗಳೂ ಕೂಡ ಹೇಳಿದರು. ಹೀಗಾಗಿ ಈ ಬಗ್ಗೆ ನಾವುಗಳೆಲ್ಲರೂ ಒಂದು understanding ಗೆ ಬಂದಿದ್ದೇವೆ. ಮೊದಲನೆಯದಾಗಿ ಒಂದು ಗಂಟೆಗಳ ಕಾಲ ಬರಗಾಲ ವಿಷಯಕ್ಕೆ ಸಂಬಂಧಪಟ್ಟಂತೆ ನಾವು ಚರ್ಚೆಯನ್ನು ಮಾಡೋಣ. ಆ ಸಮಯದಲ್ಲಿ ಪ್ರತಿ ಪಕ್ಷದ ನಾಯಕರು ಮತ್ತು ಮಾನ್ಯ ಶ್ರೀನಿವಾಸ್‌ಪ್ರಸಾದ್‌ರವರು ಕಾಂಗ್ರೆಸ್ ಪಕ್ಷದ ಕಡೆಯಿಂದ ಮಾತನಾಡುತ್ತಾರೆ. ನಂತರ ಜೆ. ಡಿ. (ಎಸ್) ಪಕ್ಷದಿಂದ ಮಾನ್ಯ ರೇವಣ್ಣನವರು ಮಾತನಾಡುತ್ತಾರೆ. ತದನಂತರ ಇದಕ್ಕೆ ಮುಖ್ಯಮಂತ್ರಿಗಳು ಅಥವಾ ಮಾನ್ಯ ಕಂದಾಯ ಸಚಿವರು ಉತ್ತರವನ್ನು ಕೊಡುತ್ತಾರೆ. ಇವೆಲ್ಲವೂ ಒಂದು ಗಂಟೆಯ ಅವಧಿಯೊಳಗೆ ಮುಗಿಯಬೇಕು. ನಂತರ ಮತ್ತೆ 3.00 ಗಂಟೆಯಿಂದ ನಿಗದಿ ಮಾಡಿರುವ ಒಂದು ಗಂಟೆಯ ಸಮಯದೊಳಗೆ ರೇವಣ್ಣನವರು ನಿಯಮ 69ರಡಿಯಲ್ಲಿ ಕಲ್ಲಿದ್ದಲಿನ ವಿಷಯಕ್ಕೆ ಸಂಬಂಧಪಟ್ಟಂತೆ ಚರ್ಚೆ ಮಾಡಲು ಅವಕಾಶ ಕೇಳಿದ್ದಾರೆ. ಆ ವಿಷಯದ ಚರ್ಚೆ ಮತ್ತು ಅದಕ್ಕೆ ಉತ್ತರವನ್ನು ಒಂದು ಗಂಟೆಯ ನಿಗದಿತ ಸಮಯದಲ್ಲಿ ಮುಗಿಯಬೇಕು. ಈ ವಿಷಯಕ್ಕೆ ಸಂಬಂಧಪಟ್ಟಂತೆ ಮಾನ್ಯ ಮುಖ್ಯಮಂತ್ರಿಗಳು ಉತ್ತರವನ್ನು ಕೊಡುತ್ತಾರೆ. ಇದಾದ ನಂತರ ಮುಂದಿನ ಒಂದು ಗಂಟೆಯ ಅವಧಿಯಲ್ಲಿ ಅಂದರೆ 4.00 ಗಂಟೆಯಿಂದ ಮಾನ್ಯ ಜಯಚಂದ್ರರವರು ನಿಯಮ 69 ರಡಿಯಲ್ಲಿ ಕೆ.ಐ.ಎ.ಡಿ.ಬಿ. ವಿಷಯದ ಬಗ್ಗೆ ಪ್ರಸ್ತಾಪ ಮಾಡಲು ಏನು ಅವಕಾಶವನ್ನು ಕೇಳಿದ್ದಾರೆ ಆ ವಿಷಯಕ್ಕೆ ಸಂಬಂಧಪಟ್ಟಂತೆ ಪ್ರಸ್ತಾಪ ಮಾಡುವುದು, ಚರ್ಚೆ ಮಾಡುವುದು ಮತ್ತು ಅದಕ್ಕೆ ಸರ್ಕಾರದ ಕಡೆಯಿಂದ ಉತ್ತರವನ್ನು ಕೊಡುವುದು ಎಂದು ಈ ರೀತಿಯಲ್ಲಿ ತೀರ್ಮಾನವನ್ನು ಮಾಡಿದ್ದೇವೆ. ಈ ಮೂರು ವಿಷಯಗಳ ಚರ್ಚೆ, ಅದಕ್ಕೆ ಉತ್ತರ, ಇವೆಲ್ಲವುಗಳೂ ಆದಮೇಲೆ ಇನ್ನೂ

ಕೆಲವೊಂದು ರೂಲ್ 69 ಬಗ್ಗೆ ವಿಷಯಗಳಿವೆ. ಅದನ್ನು ತದನಂತರದಲ್ಲಿ ತೆಗೆದುಕೊಳ್ಳೋಣ.

ಶ್ರೀ ಹೆಚ್. ಸಿ. ಬಾಲಕೃಷ್ಣ : ಈ ತೀರ್ಮಾನವೆಲ್ಲವೂ Business Advisory Committee Meetingನಲ್ಲಿ ಆಯಿತೆ?

ಅಧ್ಯಕ್ಷರು : Business Advisory Committee ಯಲ್ಲಿ ಯಾರು ಯಾರು ಪ್ರಮುಖರುಗಳು ಇರಬೇಕೋ ಅವರೆಲ್ಲರ ಸಮ್ಮುಖದಲ್ಲಿ ಚರ್ಚೆ ಮಾಡಿ ಅಲ್ಲಿಯೇ ಈ ರೀತಿಯ ತೀರ್ಮಾನವನ್ನು ತೆಗೆದುಕೊಂಡಿರುವುದು. ನಿಮ್ಮ ನಾಯಕರಾದ ರೇವಣ್ಣನವರೂ ಇದ್ದರು. ಹೀಗಾಗಿ ಈ ರೀತಿಯ ತೀರ್ಮಾನವನ್ನು ತೆಗೆದುಕೊಂಡಿದ್ದೇವೆ. ದಯವಿಟ್ಟು ಸಹಕಾರವನ್ನು ಕೊಡಬೇಕು. ಈಗಾಗಲೇ ನಿಗದಿಯಾಗಿರುವ ಸಮಯದಲ್ಲಿ ಯಾರು ಯಾರು ಮಾತನಾಡಬೇಕು ಎಂದು ನಿರ್ಧಾರ ಮಾಡಲಾಗಿದೆಯೋ ಅವರನ್ನು ಬಿಟ್ಟು ಬೇರೆ ಶಾಸಕರುಗಳು ಮತ್ತೆ ತಾವು ಮಾತನಾಡಬೇಕೆಂದು ಒತ್ತಡ ತರುವಂಥ ಕೆಲಸವನ್ನು ಮಾಡಬಾರದೆಂದು ಈ ಸಂದರ್ಭದಲ್ಲಿ ಹೇಳಬಯಸುತ್ತೇನೆ. ಈಗ ಬರಗಾಲ ವಿಷಯಕ್ಕೆ ಸಂಬಂಧಪಟ್ಟಂತೆ ಚರ್ಚೆಯನ್ನು ಪ್ರಾರಂಭ ಮಾಡೋಣ. ಮಾನ್ಯ ಶ್ರೀನಿವಾಸ್‌ಪ್ರಸಾದ್‌ರವರು ಮೊದಲು ಚರ್ಚೆಯನ್ನು ಪ್ರಾರಂಭ ಮಾಡಲಿ.

ಶ್ರೀ ವಿ. ಶ್ರೀನಿವಾಸ್‌ಪ್ರಸಾದ್ (ನಂಜನಗೂಡು): ಮಾನ್ಯ ಅಧ್ಯಕ್ಷರೆ, ಕ್ಷಮಿಸಬೇಕು. ಇವತ್ತು ತಮ್ಮ ರೂಲಿಂಗ್‌ನ್ನು ಪ್ರಶ್ನೆ ಮಾಡಿದಂಥದ್ದಲ್ಲ. ನಾನೂ ಕೂಡ ಸಂಸತ್ತಿನಲ್ಲಿ ಬಹಳ ವರ್ಷಗಳ ಕಾಲ ಇದ್ದಂಥವನು. ಯಾವಾಗಲೂ ಕೂಡ ಸದನದಲ್ಲಿ ಎರಡೂ ಕಡೆ ಚರ್ಚೆಯಾಗಿ ತಮ್ಮ ಗಮನಕ್ಕೆ ತಂದಮೇಲೆ ತಾವೇನು ರೂಲಿಂಗ್‌ನ್ನು ಕೊಡುತ್ತೀರೋ ಅದಕ್ಕೆ ನಾವೆಲ್ಲರೂ ಕೂಡ ಬದ್ಧರಾಗಬೇಕಾಗಿರುವುದು ನಮ್ಮೆಲ್ಲರ ಕರ್ತವ್ಯವಾಗಿರುತ್ತದೆ. ಆದರೆ ನಾನು ಈ ಸಂದರ್ಭದಲ್ಲಿ ಚರ್ಚೆ ಮಾಡತಕ್ಕಂಥ ವಿಷಯದ ಆಳವನ್ನು ಯೋಚನೆ ಮಾಡಿಕೊಂಡು ನಾವು ಪುನರ್ ಪರಿಶೀಲನೆಯನ್ನು ಮಾಡಬೆಕು ಎನ್ನುವ ಮನವಿಯನ್ನು ಮಾಡಿದ್ದೇವೆ. ಹೀಗಾಗಿ ತಾವು ಪುನರ್ ಪರಿಶೀಲನೆಯನ್ನು ಮಾಡಿರುವುದು ಬಹಳ ಸಂತೋಷ. ಬರಗಾಲದ ವಿಷಯದ ಬಗ್ಗೆ ಮತ್ತೆ ಚರ್ಚೆ ಮುಂದುವರೆಯಲು ತಾವು ಅವಕಾಶವನ್ನು ಕೊಟ್ಟಿದ್ದೀರಿ. ಈಗಾಗಲೇ ತಾವು ಒಂದು ಗಂಟೆಯ ಸಮಯವನ್ನು ನಿಗದಿ ಮಾಡಿ ಅಷ್ಟರೊಳಗೆ ಮುಗಿಸಬೇಕೆಂದು ಹೇಳಿದ್ದೀರಿ. ನಾನು ಮತ್ತು ಶಾಸಕಾಂಗ ಪಕ್ಷದ ನಾಯಕರು ಮತ್ತು ರೇವಣ್ಣನವರು ಚರ್ಚೆಯನ್ನು ಮಾಡಿ ಅದಕ್ಕೆ ಮಾನ್ಯ ಮುಖ್ಯಮಂತ್ರಿಗಳು ಕೂಡ ಉತ್ತರವನ್ನು ಕೊಡುವವರಿದ್ದಾರೆ. ಸ್ವಲ್ಪ ಹೆಚ್ಚು ಸಮಯ

ಮಾತನಾಡೋಣವೆಂದು ಯೋಚನೆ ಮಾಡಿದ್ದೆ. ಆದರೆ ಸಮಯದ ಮಿತಿಯಲ್ಲಿ ಕಡಿವಾಣವನ್ನು ಹಾಕಿಕೊಂಡು ನಾನು ಆದಷ್ಟು ಬೇಗ ನನ್ನ ಮಾತುಗಳನ್ನು ಮುಗಿಸುತ್ತೇನೆ. ಮಾನ್ಯ ಅಧ್ಯಕ್ಷರೆ, ನಾನು ಈ ಅಧಿವೇಶನದ ಬಗ್ಗೆ ಕೂಡ ಹೇಳುತ್ತಿದ್ದೆ. ನಮ್ಮ ಮಾನ್ಯ ಮುಖ್ಯಮಂತ್ರಿಗಳು ತಮ್ಮ ಪ್ರಾಸ್ತಾವಿಕ ನುಡಿಗಳಲ್ಲಿ ತಿಳಿಸಿರುವಂತೆ ನಾವೆಲ್ಲರೂ ಕೂಡ ಹೆಮ್ಮೆ ಪಡತಕ್ಕಂಥ ರೀತಿಯಲ್ಲಿ ಒಂದು ವಿಶೇಷ ಅಧಿವೇಶನ ಕರೆದಿರುವಂಥದ್ದು ಇದಾಗಿದೆ. ಈ ದೇಶದ ಶಾಸಕಾಂಗದ ಇತಿಹಾಸದಲ್ಲಿ ವಿಶೇಷವಾದಂಥ ಚರ್ಚೆಯನ್ನು ಮಾಡುವುದಕ್ಕಾಗಿ ನಾವು ಅವಕಾಶವನ್ನು ಮಾಡಿಕೊಟ್ಟಿದ್ದೇವೆ ಎನ್ನತಕ್ಕಂಥ ಒಂದು ಹೆಗ್ಗಳಿಕೆ ಕೂಡ ನಿಮ್ಮ ಪಾಲಿಗೆ ಇದೆ. ಇಲ್ಲ ಎಂದು ಹೇಳತಕ್ಕಂಥದ್ದಲ್ಲ. ಆದರೆ ಈ ಅಧಿವೇಶನದಲ್ಲಿ ಯಾವ ವಿಷಯಗಳು ಚರ್ಚೆಯಾಗಬೇಕು ಎಂದು ಹೇಳಿ ಪ್ರಾರಂಭ ಮಾಡಿದ್ದರು ತುಂಬಾ ಒಳ್ಳೆಯದು. ಕೃಷಿ ಮತ್ತು ಗ್ರಾಮೀಣಾಭಿವೃದ್ಧಿ ವಿಷಯ ಮತ್ತು ಇದಕ್ಕೆ ಪೂರಕವಾಗಿರತಕ್ಕಂತ ವಿಷಯಗಳಾದ ಬರ ಮತ್ತು ಅತಿವೃಷ್ಟಿ ವಿಷಯಗಳೂ ಕುಡ ಇದಕ್ಕೆ ಸೇರಸಿಕೊಂಡಂತೆ ಇರುವುದಾಗಿದೆ.

ಆ) ವಿಷಯ : ರಾಜ್ಯದಲ್ಲಿ ಉಂಟಾದ ಭೀಕರ ಬರ ಹಾಗೂ ಅತೀವೃಷ್ಟಿಯ ಬಗ್ಗೆ ಚರ್ಚೆ

ಶ್ರೀ ವಿ. ಶ್ರೀನಿವಾಸ್ ಪ್ರಸಾದ್ (ಮುಂದು): ಮೊದಲನೇ ಭಾಗದಲ್ಲಿ ಕೃಷಿ ಮತ್ತು ಗ್ರಾಮೀಣಾಭಿವೃದ್ಧಿ ಬಗ್ಗೆ ಚರ್ಚೆ ನಾಲ್ಕು ದಿನಗಳ ಕಾಲ ಬಹಳ ಸುದೀರ್ಘವಾಗಿ ಚರ್ಚೆಯಾಗಿ, ಪೂರ್ಣವಾಗಿದೆ. ಈಗ ಇದು ಎರಡನೇ ಭಾಗ. ಈ ಅಧಿವೇಶನದಲ್ಲಿ ಎರಡನೇ ಭಾಗ ಬರ ಮತ್ತು ಅತೀವೃಷ್ಟಿ ಬಗ್ಗೆ ಚರ್ಚೆಯನ್ನು ಮಾಡುತ್ತಿದ್ದೇವೆ. ಈ ನಾಲ್ಕು ದಿನಗಳು ನಡೆದಂತಹ ಚರ್ಚೆಯ ಬಗ್ಗೆ ನಾನು ಯಾವುದೇ ಸ್ಪಷ್ಟೀಕರಣ ಕೇಳುವುದಿಲ್ಲ. ಮಾನ್ಯ ಬಸವರಾಜ್ ಬೊಮ್ಮಾಯಿಯವರು ಕೂಡ ಮಾನ್ಯ ಮುಖ್ಯಮಂತ್ರಿಗಳ ಕೂಡ ತೃಪ್ತಿಯಾಗಲಿಲ್ಲ. ಅದಕ್ಕೆ ಕಾರಣ ಕೂಡ ಇದೆ. ಒಂದು ವರ್ಷದ ಹಿಂದೆ ಚುನಾವಣೆ ಸಂದರ್ಭದಲ್ಲಿ ಬಿಜೆಪಿ ಪಕ್ಷದ ಚುನಾವಣಾ ಪ್ರಣಾಳಿಕೆ ಏನಿತ್ತು, ಬಹುಶ: ಆಗ ಕೊಟ್ಟಂತಹ ಆಶ್ವಾಸನೆಗಳನ್ನು ಮಾಧ್ಯಮದ ಮಿತ್ರರು ಈಗಾಗಲೇ ಪ್ರಶ್ನೆ ಮಾಡಿದರು. ನೀವು ಚುನಾವಣೆ ಸಂದರ್ಭದಲ್ಲಿ ನಮ್ಮ ಪಕ್ಷ ಅಧಿಕಾರಕ್ಕೆ ಬಂದರೆ ಕಾರ್ಯಗತ ಮಾಡುತ್ತೇವೆಂದು ಇಷ್ಟು ಆಶ್ವಾಸನೆಗಳನ್ನು ಕೊಟ್ಟಿದ್ದೀರಲ್ಲ, ಇದಕ್ಕೆ ಸುಮಾರು ಒಂದು ಲಕ್ಷ ಕೋಟಿ ರೂಪಾಯಿ ಬೇಕು, ಇಷ್ಟು ಡಿಜಿಠಣಡಿಳಿಜ ಟಠಿಖಟುದಜ ಮಾಡುವುದಕ್ಕೆ ನಿಮಗೆ ಸಾಧ್ಯವಿದೆಯೇ ಎಂದು